# ಮಹಿಳಾ ವಿಶೇಷ

MAHILA VISHESHA

**ಕನ್ನಡ ತಿಂಗಳ ಪತ್ರಿಕೆ** **ಫೆಬ್ರವರಿ 1-28 2017**

KANNADA MONTHLY FEBRUARY 1-28 2017

ಸಂಪುಟ 2, ಸಂಚಿಕೆ 6 ಪುಟ : 24, ಬೆಲೆ : ರೂ. 5-00

Vol. 2, Issue 6, Pages: 24, Price : Rs. 5-00

ಸಂಪಾದಕರು: **ಹೆಚ್.ವಿ. ವೆಂಕಟಸುಬ್ಬರಾವ್** ಮೊಬೈಲ್ 88803-34444



## ಒಳಪುಟಗಳಲ್ಲಿ...

ಮಹಾಶಿವರಾತ್ರಿ ಮಹಿಮೆ **Pg. No. 5**
ಪರೀಕ್ಷೆಯನ್ನು ಎದುರಿಸುವ ಬಗ್ಗೆ **Pg. No. 7**
ಅಕ್ಕಮಹಾದೇವಿ ಜೀವನ **Pg. No. 10**
ಯಮಲೋಕದಲ್ಲಿ ಪತ್ರಕರ್ತ **Pg. No. 16**
ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ **Pg. No. 20**
ಪ್ರಕೃತಿ ವೆಡ್ಸ್ ಸಂತೋಷ್‌ಕುಮಾರ್ **Pg. No. 22**

## ನಾಡಿನ ಜನತೆಗೆ ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು





## ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು





ಮೈಸೂರು ಕುಂಬಾರ ಕೊಪ್ಪಲಿನಲ್ಲಿರುವ ಶ್ರೀ ಮಹದೇಶ್ವರ ದೇವಾಲಯದಲ್ಲಿ ದಿ. 24-2-2017ರಂದು ನಡೆಯುವ ಲಕ್ಷದೀಪೋತ್ಸವಕ್ಕೆ ಭಕ್ತಾದಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನದ ಆಡಳಿತ ಮಂಡಳಿ ಕೋರಿದೆ.

## ಮೈಸೂರು ಸಿಎಫ್‌ಟಿಆರ್‌ಐ ಶಾಲೆಯ ವಾರ್ಷಿಕೋತ್ಸವ



ಮೈಸೂರು ಸಿಎಫ್‌ಟಿಆರ್‌ಐ ಶಾಲೆಯ ವಾರ್ಷಿಕೋತ್ಸವದಲ್ಲಿ ಶಾಲೆಯ 1 ಮತ್ತು 2ನೇ ತರಗತಿಯ ಮಕ್ಕಳು ಕಾರ್ಯಕ್ರಮದಲ್ಲಿ ನಡೆಸಿಕೊಟ್ಟ ನೃತ್ಯ ಪ್ರದರ್ಶನ

ಮೈಸೂರು ಸಿಎಫ್‌ಟಿಆರ್‌ಐ ಶಾಲೆಯ ವಾರ್ಷಿಕೋತ್ಸವದ ನಂತರ ಶ್ರೀಮತಿ ಸರಸ್ವತೀಬಾಯಿ ಹಾಗೂ ಶಾಲೆಯ ಶಿಕ್ಷಕ ವೃಂದ ಒಟ್ಟಾಗಿ ತೆಗೆಸಿಕೊಂಡ ಫೋಟೋ.



## ನನ್ನ ಮಾತು



ವೇದಕಾಲದಲ್ಲಿ ಸ್ತ್ರೀ-ಪುರುಷರ ಸಮಾನತೆಗೆ ಬಹು ದೊಡ್ಡ ಮಹತ್ವವಿತ್ತು ಎಂಬು ದಾಗಿ ಇತಿಹಾಸದಿಂದ ತಿಳಿದು ಬರುತ್ತದೆ. ಏಕೆಂದರೆ ಮಹಿಳೆಯರು ವೇದವನ್ನು ರಚಿಸಿದ್ದಾರೆ. ವೇದ ಅಪೌರು ಷಯ ಎಂದು ಹೇಳುತ್ತಾರೆ. ಅಪೌರುಷಯ ಅಂದರೆ ಅಂತರ್ ಸಂಶೋಧನೆಯಿಂದ ದೊರೆತ ಜ್ಞಾನ ಎಂದರ್ಥ. ನಂತರ ಕಾಲದಲ್ಲಿ ಪುರುಷ ಪ್ರಧಾನ ಸಮಾಜವಾಗಿ ಪರಿವರ್ತನೆಯಾಗು ತ್ತದೆ. ಮನು ಸೃಷ್ಟಿಸಿದ ಶೂದ್ರ 12ನೇ ಶತ ಮಾನದಲ್ಲಿ ಸಮಾಜದಲ್ಲಿ ತಾಂಡವವಾಡು ತ್ತಿತ್ತು. ಮಹಿಳೆಗೆ ಯಾವುದೇ ಸಂಸ್ಕಾರವಿರ ಲಿಲ್ಲ. ಮಹಿಳೆಯರಿಗೆ ಎಲ್ಲಾ ಜ್ಞಾನದ, ಕಲಿಕೆಯ ಬಾಗಿಲು ಮುಚ್ಚಿದ್ದವು. ಶಿಕ್ಷಣದ ಅವಕಾಶಗಳೇ ಇರಲಿಲ್ಲ. ಅಂತಹ ಕಾಲಘಟ್ಟ ದಲ್ಲಿ ಮಹಾನ್ ವೈರಾಗ್ಯ ಚಕ್ರವರ್ತಿನಿ ಯಾದ ಮಹಾಸಾಧ್ವಿ ಅಕ್ಕಮಹಾದೇವಿ ಯವರು ಅಂತರ್ ಜಗತ್ತಿನ ಆಧ್ಯಾತ್ಮ ಜ್ಞಾನ ದರ್ಶನವನ್ನು ಜಗತ್ತಿಗೆ ನೀಡಿದರು. ಸ್ತ್ರೀ ಮತ್ತು ಪುರುಷ ಯಾರೂ ಹೆಚ್ಚಲ್ಲ ಯಾರೂ ಕಡಿಮೆ ಯಲ್ಲ. ಮಹಿಳೆ ಎಲ್ಲಾ ಕ್ಷೇತ್ರಗಳಲ್ಲೂ ಉತ್ತಮ ಸಾಧನೆ ಮಾಡುತ್ತಾರೆ. ಆದರೆ ಮಹಿಳೆಗೆ ಸಮಾಜ ಉತ್ತಮ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಸಂವಿಧಾನ ಅವಕಾಶ ಗಳನ್ನು ಕಲ್ಪಿಸಿದ್ದರೂ ಸಮಾಜದ ಪಾತ್ರವು ಮುಖ್ಯವಾಗಿರುತ್ತದೆ.

ಈ ಸಂಚಿಕೆಗೆ ಸೇವಾ ಸ್ಮರಣ ಪ್ರತಿಷ್ಠಾನ ಸಹಕಾರ ನೀಡಿದ್ದಕ್ಕಾಗಿ ಧನ್ಯವಾದಗಳು. ಈ ತಿಂಗಳಲ್ಲಿ ಬರುವ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ನಾಡಿನ ಜನತೆಗೆ ನಮ್ಮ ಜಾಹೀ ರಾತುದಾರರಿಗೆ ಸ್ನೇಹಿತರಿಗೆ ಹಿತೈಷಿಗಳಿಗೆ ಹಾರ್ದಿಕ ಶುಭಾಶಯಗಳು.

***ಸಂಪಾದಕ***

**ಹೆಚ್.ವಿ. ಸುಬ್ಬರಾವ್**

ನಿವೃತ್ತ ಸಾ.ಶಿ.ಇ. ನೌಕರ

**ಮಹಿಳಾ ವಿಶೇಷ**
MAHILA VISHESHA
**ಕನ್ನಡ ತಿಂಗಳ ಪತ್ರಿಕೆ**

**ಫೆಬ್ರವರಿ, 1-28 2017**

KANNADA MONTHLY

FEBRUARY 1-27 2017

ಸಂಪುಟ 2, ಸಂಚಿಕೆ 6, ಪುಟ: 24

Price/ಬೆಲೆ : ರೂ. 5-00

Vol. 2, Issue 6, Pages: 24

ಮುಖಪುಟ:
**ಮೈಸೂರಿನ ಕುಂಬಾರಕೊಪ್ಪಲಿನಲ್ಲಿರುವ ಶ್ರೀ ಮಹದೇಶ್ವರ ದೇವಾಲಯ**

ಗೌರವ ಸಂಪಾದಕರು:
**ಶ್ರೀಮತಿ ಸತ್ಯಭಾಮಾ ದಾಸ್**
**ಶ್ರೀಮತಿ ಗೀತಾ ರಾವ್**

ಸಂಪಾದಕರು:
**ಹೆಚ್.ವಿ. ವೆಂಕಟಸುಬ್ಬರಾವ್**
ಮೊಬೈಲ್ 88803-34444

ಕಛೇರಿ ವಿಳಾಸ:
ನಂ. 136, ಶ್ರೀ ನೀಲಕಂಠ ಮಠ,
ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲ,
ಮೈಸೂರು-570 004.
E-mail: mahilavishesha@yahoo.com
Web: www.mahilavishesha.in

2



# ಮಹಿಳಾ ಸಂಭ್ರಮ-2017

ಮಾರ್ಚ್ 8ರಂದು ಮಹಿಳಾ ದಿನಾಚರಣೆಯ ಪ್ರಯುಕ್ತ ಮಹಿಳೆಯರಿಗಾಗಿ ಕಾರ್ಯಕ್ರಮವನ್ನು ಮೈಸೂರಿನಲ್ಲಿ ಹಮ್ಮಿಕೊಳ್ಳಲಾಗಿದೆ. ಆಸಕ್ತ ಮಹಿಳೆಯರು ತಮ್ಮ ಹೆಸರನ್ನು ಕೆಳಗೆ ತಿಳಿಸಿರುವ ಮೊಬೈಲ್ ನಂಬರಿನಲ್ಲಿ ದಿ. 25-2-2017ರ ಒಳಗಾಗಿ ನೊಂದಾಯಿಸಿಕೊಳ್ಳಬೇಕು. ನೊಂದಾಯಿಸಿ ಕೊಂಡ ಅಭ್ಯರ್ಥಿಗಳು ಆಯ್ಕೆಯ ಪ್ರಕ್ರಿಯೆಗೆ ಒಳಪಡಬೇಕು. ಆಯ್ಕೆಗೊಂಡ ಮಹಿಳೆಯರನ್ನು ಸ್ಪರ್ಧೆಯ ಕಣಕ್ಕೆ ತರಲಾಗುವುದು.

ಮಹಿಳೆಯರಿಗೆ ಇದು ಒಂದು ಸಂತಸದ ಸಮಯ. ನೀವು ಟೀವಿಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ನೋಡಿದ್ದೀರಿ, ನೋಡುತ್ತಿದ್ದೀರಿ. ಆದರೆ ನಿಮಗೆ ಅವಕಾಶಗಳಿರುವುದಿಲ್ಲ. ಅದೇ ರೀತಿಯಲ್ಲಿ ನಿಮಗೆ ಕಾರ್ಯಕ್ರಮವನ್ನು ಏರ್ಪಡಿಸಲಾಗುವುದು. ಬಾಚಿಕೊಂಡು ಹೋಗುವಷ್ಟು ಬಹುಮಾನಗಳು ದೊರೆಯುತ್ತವೆ.

ಆಯ್ಕೆಗೊಂಡ ಸ್ಪರ್ಧಿಗಳಿಗೆ ಸಲಹೆ, ಸೂಚನೆ, ಸ್ಪರ್ಧೆಯ ಸಮಯ, ದಿನಾಂಕ, ಸ್ಪರ್ಧೆ ನಡೆಯುವ ಸ್ಥಳ ಮುಂತಾದ ಮಾಹಿತಿಗಳನ್ನು ನೀಡಲಾಗುವುದು. ಸ್ಪರ್ಧೆಗೆ ಆಯ್ಕೆಗೊಂಡವರೆಲ್ಲರಿಗೂ ಒಂದು ಬಹುಮಾನವಂತೂ ಖಚಿತವಾಗಿ ಇರುತ್ತದೆ.

ಹೆಸರನ್ನು ನೊಂದಾಯಿಸಿಕೊಳ್ಳಲು ಕೊನೆಯ ದಿನಾಂಕ 25-2-017.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

ಶ್ರೀ ಸುಬ್ಬರಾವ್, 92435-84444

ಶ್ರೀ ಶರತ್ ಕುಮಾರ್, 94810-68476

## 225125

ಆರು ಶತಮಾನ ಪೂರ್ಣಗೊಂಡು ಬೆಳ್ಳಿ ವರ್ಷವೂ ಪೂರ್ಣಗೊಂಡ ಮೈಸೂರು ಒಡೆಯರ್‌ರವರ ದಿನಗಳು ಈಗ್ಗೆ 225125 ದಿನಗಳಾಗಿವೆ. ವಿಜಯನಗರ ಸಾಮ್ರಾಜ್ಯದ ನಂತರ ಕನ್ನಡ ನಾಡಿನ ಕೊನೆಯ ರಾಜಮನೆತನ ಆಳಿದ ದಿನ ಹಾಗೂ ಇಂದಿಗೂ ರಾಜ ಮನೆತನ ಇರುವ ವಂಶ ಕರ್ನಾಟಕದ ಮೈಸೂರು ನಗರದಲ್ಲಿದೆ.

# ಮಹಾಶಿವರಾತ್ರಿ ಮಹಿಮೆ



ಓಂ ನಮಃ ಶಿವಾಯ ಅಥವಾ ಶಿವಾಯ ನಮಃ ಎಂಬ ಪಂಚಾಕ್ಷರೀ ಮಂತ್ರದಲ್ಲಿ ಅದೆಂಥ ಅದಿಯಾತ್ಮವಿದೆ, ಆರೋಗ್ಯವಿದೆ, ಸುಖವಿದೆ, ಶಾಂತಿ ಇದೆ, ನೆಮ್ಮದಿ ಇದೆ ಹಾಗೂ ಪ್ರತಿಯೊಬ್ಬರನ್ನೂ ತನ್ನತ್ತ ಸೆಳೆಯುವ ಮೋಡಿ ಇದೆ! ಶಿವ ಶಿವ ಎಂದರೆ ಭಯವಿಲ್ಲ, ಶಿವನಾಮಕೆ ಸಾಟಿ ಬೇರಿಲ್ಲ ಎಂಬ ವಾಣಿ ಸುಳ್ಳಲ್ಲ. ಪ್ರತಿವರ್ಷ ಛಳಿಗಾಲದ ಅಂತ್ಯ, ಬೇಸಗೆಕಾಲದ ಆರಂಭ ಹಾಗೂ ಇವೆರಡರ ನಡುವಣದ ಎಲ್ಲೆ ಎನ್ನಬಹುದಾದ ಮಾಘಮಾಸದ ಬಹುಳ ಚತು ಅಮಾವಾಸ್ಯೆ ಹಿಂದಿನ ದಿವಸ ಪ್ರಾರಂಭವಾಗಿ, ಮುಂದಿನ 24 ತಾಸಿನವರೆಗೂ ದ್ರವ-ಫಲಾಹಾರ, ಪೂಜೆ-ಪುನಸ್ಕಾರ-ಹರಿಕಥೆ-ಶಿವಕಥೆ, ಹವನ-ಹೋಮ, ಉಪವಾಸ-ಜಾಗರಣೆ, ಇತ್ಯಾದಿ ಅನೇಕ ಬಗೆಯ ಉತ್ಸವಗಳನ್ನು, ಹರಿ/ಹರ ಪಂಥೀಯರಾರೇ ಆಗಿರಲಿ ಪ್ರತಿಯೊಂದು ಹಿಂದೂ ಕುಟುಂಬವು ಸಾಂಪ್ರದಾಯಿಕವಾಗಿ ಶ್ರದ್ಧಾಭಕ್ತಿಗಳಿಂದ, ಅತ್ಯುತ್ಸಾಹದಿಂದ ಆಚರಿಸುವ ಒಂದು ಶಿಷ್ಟಾಚಾರ ಶಿವಾಚಾರ ಪದ್ಧತಿಯೇ ಶಿವರಾತ್ರಿ ಹಬ್ಬ!

ಪೌರಾಣಿಕವಾಗಿ ಜನಜನಿತವಾಗಿರುವ ಪ್ರಕಾರ ಸೃಷ್ಟಿಕರ್ತನಾದ ಬ್ರಹ್ಮನಿಗೇ ಪಿತಾಮಹನಾಗಿ ಪದ್ಮನಾಭ ಇರುವನೆಂತಲೂ, ಶ್ರೀಮನ್ನಾರಾಯಣನಿಗೂ ಪಿತೃವಾಗಿ ಓಂಕಾರಮೂರ್ತಿ ಇರುವನೆಂದೂ ಪ್ರತೀತಿಯಿದೆ. ಆದರೆ, ಆದಿ ಪರಮಾತ್ಮ ಪರಂಜ್ಯೋತಿಯಾದ ಪರಮಶಿವನಿಗೆ ಪಿತನು ಇದ್ದ ಎಂಬುದಕ್ಕೆ ಪುರಾಣ ಹಿನ್ನೆಲೆ ಇಲ್ಲವೆಂದು ಹೇಳಬಹುದು. ಆದ್ದರಿಂದಲೇ ಶಿವನನ್ನು ತ್ರಿಮೂರ್ತಿ ಜೇಷ್ಠ ತ್ರಿಲೋಕಶ್ರೇಷ್ಠ ಎಂದು ಹಾಡಿ ಕೊಂಡಾಡಿ ಪೂಜಿಸುತ್ತೇವೆ. ಅಷ್ಟೇ ಏಕೆ, ಸರ್ವಕಾಲದಲ್ಲೂ ಪರ್ವಕಾಲದಲ್ಲೂ





ಪ್ರಪಂಚದಾದ್ಯಂತ ಪ್ರಥಮ ಪೂಜಿತನಾದ ಗಜಮುಖ-ಗಣಪತಿಗೇ ತಂದೆಯೆನಿಸಿ ಅತ್ಯುನ್ನತ ಪೂಜಾರ್ಹ ಸ್ಥಾನದಲ್ಲಿರುವುದು ಶಿವನಲ್ಲದೆ ಮತ್ಯಾರು? ತನ್ನ ಗೌರಿಪುತ್ರನಿಗೆ ತನ್ನಲ್ಲಿದ್ದ ಈಶ್ವರ ಪಟ್ಟವನ್ನು ವರವಾಗಿ ನೀಡಿ ವಿಘ್ನೇಶ್ವರ, ಗಣೇಶ ಎಂಬಿತ್ಯಾದಿ ಈಶ್ವರ ನಾಮದೊಂದಿಗೆ ಬೆರೆತ ಲಂಬೋದರ ಸಹಸ್ರನಾಮ ಪ್ರಸಿದ್ಧಿಯಾಗಲು ಕಾರಣ ಪುರುಷ ಶಿವನೇ ಅಲ್ಲವೇ?

ಅಖಿಲಾಂಡ ಕೋಟಿ ಬ್ರಹ್ಮಾಂಡ ಪಾಲಕನಾದ ಮಹಾಶಿವನು ಅಖಿಲೇಶ್ವರನಾಗಿ, ಅಮೃತೇಶ್ವರನಾಗಿ, ವಿಶ್ವೇಶ್ವರನಾಗಿ, ಜ್ಞಾನೇಶ್ವರನಾಗಿ, ಲೋಕೇಶ್ವರನಾಗಿ, ಜಗದೀಶ್ವರನಾಗಿ, ಸುರಾಸುರರಿಂದ ವಂದಿಸಲ್ಪಟ್ಟು ಅನವರತ ಪೂಜಿಸಲ್ಪಡುತ್ತಿರುವ ಏಕೈಕ ದೇವರಾಗಿದ್ದಾನೆ.

ಕನ್ನಡ ಸಾಹಿತ್ಯ/ಸಾರಸ್ವತ ಲೋಕದ ವಚನಕಾರರೆಲ್ಲರೂ ಶಿವಭಕ್ತರು ಎಂಬುದು ಒಂದು ಅದ್ಭುತ! ಇವರು, ಕೇವಲ ತಮ್ಮ ವಚನ ರಚನೆಗಳಿಂದ ಶಿವನನ್ನು ಹಾಡಿ ಹೊಗಳಿದವರಷ್ಟೆ ಅಲ್ಲ, ತಮ್ಮ ದಿಟಭಕ್ತಿಯಿಂದ ಶಿವನನ್ನು ಸಾಕ್ಷಾತ್ಕಾರ ಮಾಡಿಕೊಂಡ ಪರಮ ಪಾವನರೂ ಹೌದು! ಅದರಲ್ಲೂ ಮಹಾಮಂತ್ರಿ ಬಸವರಸರು, 'ಉಳ್ಳವರು ದೇವಾಲಯವ ಮಾಡುವರು ನಾನೇನ ಮಾಡಲಿ ಬಡವ' ಮತ್ತು 'ಕಾಯಕವೇ ಕೈಲಾಸ' ಎಂಬಿತ್ಯಾದಿ ವಚನಗಳಿಂದಾಗಿ ವೈದಿಕ ಧರ್ಮದ/ಮೂಢ ನಂಬಿಕೆಗಳ ವಿರುದ್ಧ ವೈಚಾರಿಕ ಕ್ರಾಂತಿಯನ್ನೇ ಮಾಡಿದರು. ತನ್ಮೂಲಕ ಸಾಮಾಜಿಕ ಕಳಕಳಿಯುಳ್ಳ ಅತ್ಯುತ್ತಮ ಜಾತ್ಯಾತೀತ ಸಮಾಜಸೇವಕ ಎನಿಸಿಕೊಂಡರು. ಆ ದಿನಗಳಲ್ಲಿ ಅವುಗಳೆಲ್ಲವೂ ಸಾಧ್ಯವೆನಿಸಿದ್ದು 'ಕೂಡಲಸಂಗಮದೇವ' (ಶಿವ) ನ ಕೃಪೆಯಿಂದಲೇ ಎಂಬುದು ಸ್ವತಃ ಬಸವಣ್ಣನಾದಿಯಾಗಿ ಪ್ರತಿಯೊಬ್ಬ ಶಿವಭಕ್ತನ ನಂಬಿಕೆ!

-ಪರಶಿವಮೂರ್ತಿ, ಮೈಸೂರು

# ಪರೀಕ್ಷೆಯನ್ನು ಎದುರಿಸೋಣ ಬನ್ನಿ

ಬಹುತೇಕ ವಿದ್ಯಾರ್ಥಿಗಳು ತಮ್ಮ ವಿಫಲತೆಗೆ ಮನಸ್ಸನ್ನು ದೂರುತ್ತಾರೆ. 'ಮನಸ್ಸು ದುರ್ಬಲವಾಗಿದೆ. ಮನಸ್ಸು ಏಕಾಗ್ರಗೊಳ್ಳುತ್ತಿಲ್ಲ' ಇದು ವಿದ್ಯಾರ್ಥಿಗಳ ಸಾಮಾನ್ಯ ಸಮಸ್ಯೆ. ಮನಸ್ಸು ನಮ್ಮ ಅಂಕಿತದಲ್ಲಿರಬೇಕಾದ ಒಂದು ಸಾಧನವೇ ಹೊರತು, ಮನಸ್ಸು ಆಡಿದಂತೆ ನಾವು ನಡೆಯಬೇಕಾಗಿಲ್ಲ ಎಂಬ ಅರಿವು ಮೂಡಿದಾಗ ಈ ಸಮಸ್ಯೆಗೆ ಪರಿಹಾರ ದೊರಕುವುದು. ಮನಸ್ಸಿನ ಶಕ್ತಿಗಳನ್ನು, ಏಕಾಗ್ರತೆಯನ್ನು ಬೆಳೆಸಿಕೊಳ್ಳುವುದರಲ್ಲಿ ನಮಗೆ ಅತ್ಯಂತ ಸಹಕಾರಿಯಾದುದು ಧ್ಯಾನ ಮತ್ತು ಪ್ರಾರ್ಥನೆ.

ಪರೀಕ್ಷೆಯಲ್ಲಿ ಬರೆಯುವುದು ಹೇಗೆ? ಇದು ಬಹಳ ಪ್ರಮುಖವಾದ ವಿಚಾರ. ನಾವು ವರ್ಷಪೂರ್ತಿ ಕಲಿತ ಕಲಿಕೆಯನ್ನು ಕೆಲಗಂಟೆಗಳಲ್ಲಿ ಭಟ್ಟಿಯಿಳಿಸುವುದು ಒಂದು ಕಲೆಯೇ ಆಗಿದೆ. ಆ ಕಲೆಯ ಮರ್ಮವನ್ನು ನಾವು ಅರಿಯಬೇಕು. ಪರೀಕ್ಷೆಯ ಬರವಣಿಗೆಗೆ ಮೂರು ಸೀಮಿತಗಳಿರುತ್ತವೆ. 1. ಕಾಲ, 2. ಅಂಕ, 3. ವಿಷಯ. ಕಾಲಕ್ಕೆ ಸರಿಯಾಗಿ ಯೋಜಿಸಿಕೊಂಡು ಬರೆಯಬೇಕು.

ಪರೀಕ್ಷೆ ಹತ್ತಿರವಾದಂತೆ ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಕಳವಳಗೊಳ್ಳುವುದನ್ನು ಕಾಣುತ್ತೇವೆ. ಮಾನಸಿಕ ಪ್ರಕ್ಷುಬ್ಧತೆ ದೈಹಿಕ ಅನಾರೋಗ್ಯವಾಗಿ ಪರಿಣಮಿಸುತ್ತದೆ. ಇದಕ್ಕೆ ಅವಕಾಶ ಕೊಡಬಾರದು. ಪರೀಕ್ಷೆ ಹತ್ತಿರವಾದಂತೆಲ್ಲ ಸಾಕಷ್ಟು ವಿರಾಮ ಪಡೆದರೆ ಒಳ್ಳೆಯದು. ಮನಸ್ಸನ್ನು ಲವಲವಿಕೆಯಿಂದ ಇಟ್ಟುಕೊಳ್ಳುವುದಕ್ಕೆ ವ್ಯಾಯಾಮ, ಗಾಳಿ ಸಂಚಾರಗಳನ್ನು ಸ್ವಲ್ಪವಾದರೂ ಮಾಡಬೇಕು. ಏನೇ ಆಗಲಿ, ದುಗುಡ ಕಾತರ ನಮ್ಮನ್ನು ಆವರಿಸುವುದಕ್ಕೆ ಬಿಡದೆ ಅದನ್ನು ನಿವಾರಿಸಿ ಶಾಂತ ಮನಸ್ಸನ್ನು ದಯಪಾಲಿಸುವಂತೆ ಭಗವಂತನನ್ನು ಪ್ರಾರ್ಥಿಸಬೇಕು.

ಪರೀಕ್ಷೆಯ ದಿನ ಮಾಡಬೇಕಾದ ಬಹುಮುಖ್ಯವಾದ ಸಂಗತಿಯೆಂದರೆ, ಪರೀಕ್ಷೆಗೆ ನಾವು ಕೊಂಡೊಯ್ಯಬೇಕಾದ ಪೆನ್, ಪೆನ್ಸಿಲ್, ಹಾಲ್ ಟಿಕೆಟ್ ಮೊದಲಾದ ಅವಶ್ಯಕ ವಸ್ತುಗಳನ್ನು ಮರೆಯದೆ ಜೋಡಿಸಿಟ್ಟುಕೊಳ್ಳುವುದು. ಇವುಗಳನ್ನು ಒಂದು ಪಟ್ಟಿ ಮಾಡಿ ಹಿಂದಿನ ದಿನವೇ ತಯಾರಾಗಿಟ್ಟಿರುವುದು ಒಳ್ಳೆಯದು. ಇದರಿಂದ ಪರೀಕ್ಷೆಗೆ ಹೊರಡುವ ಸಮಯದಲ್ಲಿ ಅನಾವಶ್ಯಕವಾಗಿ ಗಡಿಬಿಡಿ ಮಾಡಿಕೊಳ್ಳುವುದು ತಪ್ಪುತ್ತದೆ. ಪರೀಕ್ಷೆಗೆ ಹೊರಡುವ ಮುನ್ನ ದೇವರಿಗೆ, ತಂದೆ-ತಾಯಿಗಳಿಗೆ ನಮಸ್ಕರಿಸಿ ಹೋಗುವುದು ಉತ್ತಮ.

ಪರೀಕ್ಷೆಯಲ್ಲಿ ಯಶಸ್ಸು ಗಳಿಸಲು ಮೂಲಸೂತ್ರಗಳು ಅಧ್ಯಯನ, ಪರಿಶ್ರಮ, ಅಭ್ಯಾಸ, ಆತ್ಮವಿಶ್ವಾಸ, ಮತ್ತು ನಿರ್ಭಯತೆ. ಈ ಸೂತ್ರಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿದರೆ ಖಂಡಿತ ವಿದ್ಯಾರ್ಥಿಗಳು ಗುರಿಯನ್ನು ಸೇರಿಯೇ ಸೇರುತ್ತಾರೆ.

''ಏಳಿ ಎದ್ದೇಳಿ, ಗುರಿ ಮುಟ್ಟುವವರೆಗೂ ನಿಲ್ಲದಿರಿ.''

-ಶ್ರುತಿ, ಹಾಸನ



# ಸಾಮಾಜಿಕ ಬದಲಾವಣೆಯಲ್ಲಿ ಮಹಿಳಾ ಪಾತ್ರ

(ಹಿಂದಿನ ಸಂಚಿಕೆಯಿಂದ)



**ಕೋಪನ್ ಹೇಗನ್ ಸಮಾವೇಶ:**

ಉದ್ಯೋಗ, ಆರೋಗ್ಯ ಮತ್ತು ಶಿಕ್ಷಣ - ಈ ಮೂರು ಕ್ಷೇತ್ರಗಳು ಮಹಿಳಾ ಹಿತಾಸಕ್ತಿಗೆ ಬಹಳ ಮಹತ್ವವಾದವುಗಳೆಂದು ಕೋಪನ್ ಹೇಗನ್ ಸಮಾವೇಶ ಪರಿಗಣಿಸಿತು.

**ನೈರೋಬಿ ಸಮಾವೇಶ:**

ಮೂರನೆಯ ಮಹಿಳಾ ವಿಶ್ವಸಮ್ಮೇಳನವು ನೈರೋಬಿಯಲ್ಲಿ ಜುಲೈ 15, 1985ರಂದು ಪ್ರಾರಂಭವಾಯಿತು. ಈ ಸಮ್ಮೇಳನದಲ್ಲಿ ಹಿಂದಿನ ಸಮ್ಮೇಳನಗಳ ತೀರ್ಮಾನಗಳ ಅನುಷ್ಠಾನ ಕುರಿತು ಚರ್ಚಿಸಿ ಮಹಿಳಾ ಸಮಸ್ಯೆಗಳ ನಿವಾರಣೆಗಳಿಗೆ ಹೋರಾಡಲು ಕರೆಕೊಟ್ಟಿತು.

**ಬೀಜಿಂಗ್ ಸಮಾವೇಶ:**

ಏಪ್ರಿಲ್ 7, 1995ರಲ್ಲಿ ಪ್ರಾರಂಭಗೊಂಡ ಈ ಸಮ್ಮೇಳನ ಮಹಿಳೆಯರಿಗೆ ಸಂಬಂಧಿಸಿದ 12 ಕ್ಷೇತ್ರಗಳನ್ನು ಗುರುತಿಸಿತು. ಅವುಗಳೆಂದರೆ ಬಡತನ, ಶಿಕ್ಷಣ, ಆರೋಗ್ಯ, ಹಿಂಸೆ, ಸಶಸ್ತ್ರ ಸಂಘರ್ಷ, ಆರ್ಥಿಕ, ಸಂರಚನೆಗಳು, ಅಧಿಕಾರ ಹಂಚಿಕೆ ಮತ್ತು ತೀರ್ಮಾನಿಸುವಿಕೆ, ಮಹಿಳಾ ಪ್ರಗತಿಯನ್ನು ಉತ್ತೇಜಿಸಲು ಕ್ರಿಯಾತ್ಮಕ ಕ್ರಮಗಳು, ಮಾನವ ಹಕ್ಕುಗಳು, ಸಮೂಹ ಮಾಧ್ಯಮ, ಪರಿಸರ ಮತ್ತು ಹೆಣ್ಣುಮಕ್ಕಳ ಸ್ಥಿತಿಗತಿ.

**ಕೈರೋದ ಜನಸಂಖ್ಯಾ ಸಮ್ಮೇಳನ (1994):**

ಈ ಸಮ್ಮೇಳನದಲ್ಲಿ ಲಿಂಗ ಸಮಾನತೆ ಮತ್ತು ಸಮತೆ, ಮಹಿಳಾ ಶಕ್ತಿ ಸಂವರ್ಧನೆ, ಮಹಿಳೆಯರ ಪ್ರಜನನ ಸಮಸ್ಯೆ, ಪ್ರಜನನ ಹಕ್ಕುಗಳು ಮತ್ತು ಹಿಂಸೆ ನಿರ್ಮೂಲನ ವಿಷಯಗಳನ್ನು ಗಂಭೀರವಾಗಿ ಚರ್ಚಿಸಲಾಯಿತು.

ಮಾನವ ಹಕ್ಕುಗಳು ವಿಶ್ವ ಸಮಾವೇಶ ವರದಿ (1993) ಹೆಚ್ಚು ಹೆಚ್ಚಾಗಿ ಲಿಂಗ ಸಮಾನತೆಯತ್ತ ಸಾಗಲು ತಿಳಿಸಿದೆ.

**ಭಾರತದಲ್ಲಿ ಮಹಿಳಾ ಸಂಘಟನೆಗಳು:**

ಪುರುಷ ಪ್ರಧಾನ ಸಮಾಜದಲ್ಲಿ ಪುರುಷನಿಗೆ ಸಮಾನವಾದ ಸ್ಥಾನಮಾನಗಳನ್ನು ಹೊಂದಲು, ಅದಕ್ಕೆ ಪೂರಕವಾದ ಸಾಮಾಜಿಕ ವ್ಯವಸ್ಥೆಯನ್ನು ಸಜ್ಜುಗೊಳಿಸಿಕೊಳ್ಳಲು,

ಹಾಗೆಯೇ ಮಹಿಳೆಯೊಳಗಿನ ಅಂತಃಶಕ್ತಿ ಉದ್ದೀಪನಗೊಳಿಸಲು ಮಹಿಳಾ ಸಂಘಟನೆಗಳ ಪಾತ್ರ ಪ್ರಮುಖವಾದುದು. ಈ ನಿಟ್ಟಿನಲ್ಲಿ ನಮ್ಮ ದೇಶದಲ್ಲಿ ರಾಷ್ಟ್ರೀಯ ಮಟ್ಟದ ಏಳು ಪ್ರಮುಖ ಮಹಿಳಾ ಸಂಘಟನೆಗಳು ಕಾರ್ಯ ನಿರ್ವಹಿಸುತ್ತಿವೆ. ಅವುಗಳೆಂದರೆ-

1. ಭಾರತದ ಮಹಿಳೆಯರ ರಾಷ್ಟ್ರೀಯ ಒಕ್ಕೂಟ (National Federation for Indian Women)

2. ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳೆಯರ ಸಂಘ (All India Democratic Women's Association)

3. ಅಖಿಲ ಭಾರತ ಮಹಿಳೆಯರ ಸಮಾವೇಶ (All India Women's Conference)

4. ಮಹಿಳೆಯರ ಜಂಟಿ ಕಾರ್ಯಕ್ರಮ (Joint Women's Programme)

5. ಮಹಿಳೆಯರ ಅಭ್ಯುದಯ ಅಧ್ಯಯನ ಕೇಂದ್ರ (Centre for Women's Development)

6. ತರುಣ ಕ್ರಿಶ್ಚಿಯನ್ ಮಹಿಳೆಯರ ಸಂಘ (Young Women's Christian Association)

7 ಮಹಿಳಾ ಉದ್ಯೋಗಿಗಳ ಸಮನ್ವಯ ಸಮಿತಿ (Working Women's Coordination Committee)

**ಮಹಿಳಾ ಅಭಿವೃದ್ಧಿ-ಬೇಕು ಬೇಡಗಳು:**

★ ಮಹಿಳೆಯರು ಹಿಂಜರಿತ, ಕೀಳರಿಮೆ, ಸಂಪ್ರದಾಯಗಳು, ಮೂಢನಂಬಿಕೆಗಳಿಗೆ ಶರಣು ಹೋಗುವುದು ಬೇಡ. ಸಮಾಜದಲ್ಲಿ ಮಾನ, ಮರ್ಯಾದೆ, ಗೌರವಗಳು ಹೆಣ್ಣಿಗೆ ಮಾತ್ರ ಭೂಷಣಪ್ರಾಯವಾದದ್ದು, ಆಕೆ ಎಲ್ಲಿಯೂ ಹೆಜ್ಜೆ ತಪ್ಪಬಾರದು, ಅವಳಿಗೆ ಕ್ಷಮೆಯೇ ಇಲ್ಲ ಎನ್ನುವ ಧೋರಣೆಯನ್ನು ಪುರುಷ ಸಮಾಜ ಬಿಡಬೇಕು.

★ ಪುರುಷರಿಗೆ ಸಮಾನವಾದ ಶಿಕ್ಷಣವನ್ನು ಮಹಿಳೆ ಪಡೆದುಕೊಳ್ಳಲು ಉತ್ಸುಕಳಾಗಬೇಕು. ಹೆಣ್ಣುಮಕ್ಕಳ ತಂದೆ-ತಾಯಿಯರು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಮಾಡುವ ಖರ್ಚು ವ್ಯರ್ಥ ಎನ್ನುವ ಧೋರಣೆ ಬೇಡ.

★ ಪುರುಷ ಪ್ರಧಾನ ಸಮಾಜದಲ್ಲಿ ಪುರುಷನ ಯಜಮಾನಿಕೆಯನ್ನೇ ಮಹಿಳೆಯರು ಒಪ್ಪುವುದು ಬೇಡ. ಬದಲಾಗಿ ಅನ್ಯಾಯ ಕಂಡಾಗ ವಿರೋಧಿಸುವ ದಿಟ್ಟತನ ಮೈಗೂಡಿಸಿಕೊಳ್ಳಬೇಕು.

*(ಮುಂದುವರಿಯುವುದು)*

## ವಿಚಾರಣೆ

ಕುಡುಕನೊಬ್ಬ ಮನೆಯ ಮಹಡಿಯ ಛಾವಣಿಯಿಂದ ಕೆಳಕ್ಕೆ ಬಿದ್ದ. ಅಕ್ಕಪಕ್ಕದ ಜನರೆಲ್ಲ ಜಮಾಯಿಸಿ ವಿಚಾರಿಸಿದರು. ''ಏನಾಯಿತು, ಏನಾಯಿತು...?''

ಕುಡುಕ: ಗೊತ್ತಿಲ್ಲ ಸ್ವಾಮಿ... ನಾನೂ ಈಗ ತಾನೆ ಕೆಳಕ್ಕಿಳಿದು ಬಂದೆ...!



# ಅಕ್ಕಮಹಾದೇವಿ ಜೀವನ

(ಹಿಂದಿನ ಸಂಚಿಕೆಯಿಂದ)



ಮಾಯೆ ಕೋಪಕ್ಕೆ ವಶಳಾಗಿ 'ಸ್ತ್ರೀತ್ವವು ಹರಿಹರ ಬ್ರಹ್ಮರನ್ನೆ ಗೆಲ್ಲಬಲ್ಲ ಮಾಯಾಶಕ್ತಿಯಾಗಿದೆ' ಮುನಿಗಳ ತಪೋಭಂಗ ಮಾಡಿದೆ. ನೀನೆಷ್ಟರವನು ಎಂಬ ಧೋರಣೆಯನ್ನು ತೋರುವಳು.

ಆಗ ಅಲ್ಲಮನು 'ನಿನ್ನಲ್ಲಿನ್ನೂ ಅಹಂಕಾರ ರೂಪಗರ್ವಗಳು ಯೌವನ ಮದಗಳು ತುಂಬಿಕೊಂಡಿವೆ. ನಾನೆಂಬ ಈ ಮಾಯೆ ನಿನ್ನಲ್ಲಿ ಅಳಿದ ಹೊರತು ನಿನಗೆ ನಿಜವಾದ ಪ್ರೇಮ ಸಾಕ್ಷಾತ್ಕರಿಸದು' ಎಂದು ಅಂತರ್ಧಾನನಾಗುವನು. ತಾಮಸಗುಣ ಸ್ವರೂಪಿಯಾದ ಮಾಯೆಯು ಸೋಲುಂಡು ಕೈಲಾಸಕ್ಕೆ ಮರಳುವಳು. ಶಿವನು 'ನಿನ್ನ ಸಾತ್ವಿಕ ಭಕ್ತಿಯ ಅಂಶವೊಂದನ್ನು ಭೂಮಿಗೆ ಸ್ತ್ರೀಯಾಗಿ ಕಳುಹಿಸು. ತಾಮಸ ಗೆಲ್ಲದೆಡೆಯಲ್ಲಿ ಸಾತ್ವಿಕತೆ ವಿಜಯ ಖಂಡಿತ' ಎಂದು ಸಲಹೆ ನೀಡಿ ಸಮಾಧಾನಗೊಳಿಸುವನು. ಪಾರ್ವತಿದೇವಿಯ ಸಾತ್ವಿಕ ಅಂಶವೇ ಭೂಮಿಯಲ್ಲಿ ಅಕ್ಕಮಹಾದೇವಿಯಾಗಿ ಜನಿಸಿತು ಎಂದು ಪೌರಾಣಿಕ ಹಿನ್ನೆಲೆ ತಿಳಿಸುತ್ತದೆ.

**ಅಕ್ಕಮಹಾದೇವಿಯವರ ಬದುಕು ಬವಣೆ ಸಾಧನೆ**

ಉಡುತಡಿಯಲ್ಲಿ ಸುಮತಿ ಮತ್ತು ನಿರ್ಮಲ ದಂಪತಿಗಳ ಮಗಳಾಗಿ ಅಕ್ಕಮಹಾದೇವಿ ಜನಿಸಿದರು. ಆಗ ಅವರನ್ನು 'ಮಹಾದೇವಿ' ಎಂದು ಕರೆಯಲಾಗುತ್ತಿದ್ದಿತು. ಸಂಪ್ರದಾಯಸ್ಥ ವೀರಶೈವರ ಮನೆಯಲ್ಲಿ ಹುಟ್ಟಿ ಬೆಳೆದ ಮಹಾದೇವಿಯು ಸಹಜವಾಗಿಯೆ ಶಿವಭಕ್ತಿಯ ಸಾಕಾರ ಮೂರ್ತಿಯಾಗಿದ್ದಳು. ಆಕೆಯ ಆಟಪಾಟ ಪೂಜೆ ಪ್ರಸಾದಗಳೆಲ್ಲವೂ ಶಿವಲೀಲೆಗಳೇ ಶಿವಮಯವೇ ಆಗಿದ್ದವು.

ಕಣ್ಣು ಸೆಳೆವ ರೂಪಸಿಯಾಗಿ ಬೆಳೆದ ಮಹಾದೇವಿ ತನ್ನ ಗೆಳತಿಯರೊಡನೆ ಶಿವಾಲಯಕ್ಕೆ ಹೊರಟಿರಬೇಕಾದರೆ ರಾಜ ಕೌಶಿಕನು ಅವಳಿಗೆದುರಾಗಿ ಈ ಸೌಂದರ್ಯ ರಾಶಿಯನ್ನು ತನ್ನದಾಗಿಸಿಕೊಳ್ಳಬಯಸಿದನು. ರಾಜ ಪ್ರಭುತ್ವದಲ್ಲಿ ಅವರು ಯಾವಾಗ ಏನನ್ನು ಬೇಕಾದರೂ ದತ್ತಾಪಹಾರ ಮಾಡಿಯಾದರೂ ಪಡೆದುಕೊಳ್ಳುವಷ್ಟು ತೀವ್ರ ಲಾಲಸಿಗಳಾಗಿದ್ದರು. ಕೌಶಿಕನು ಮಹಾದೇವಿಯಕ್ಕನ ಮನೆಗೆ ವಿವಾಹದ ಪ್ರಸ್ತಾಪದೊಂದಿಗೆ ಬೆದರಿಕೆಯನ್ನೂ ಕಳುಹಿಸಿದ್ದನೆಂದು ಕಾಣುತ್ತದೆ. ಯೌವನದಲ್ಲೇ ವೈರಾಗ್ಯ ಪಥದತ್ತ ಆಕರ್ಷಿತಳಾಗಿದ್ದ ಮಹಾದೇವಿ 'ಕೌಶಿಕನೂ ಶಿವಭಕ್ತನೆಂದು ತಿಳಿದ ಬಳಿಕವಷ್ಟೇ ತನ್ನ ಶಿವಾರಾಧನೆಗೆ ಯಾವುದೇ ವಿಘ್ನ ಬರಕೂಡದು ಎಂದು ಷರತ್ತು ಹಾಕಿಯೇ ವಿವಾಹವಾಗಲು ಒಪ್ಪುವಳು.'

ಅರಮನೆಯಲ್ಲಿ ಆಗುವುದೇ ಬೇರೆ! ಅವಳು ಅಂದುಕೊಂಡಿದ್ದೇ ಬೇರೆ! ಕೌಶಿಕನು

ಶಿವಪೂಜೆಯನ್ನು ಮಾಡುತ್ತಿದ್ದನಾದರೂ ಕಟ್ಟಾಭವಿಗಳಂತೆಯೇ ವರ್ತಿಸುವವನು. ಜಂಗಮರ ಆರೋಗಣೆಯ ಸಮಯದಲ್ಲಿ ಅವಮಾನ, ಭಕ್ತಿ ಪರವಶತೆಯ ಗಳಿಗೆಯಲ್ಲಿ ಸಮಾಗಮಕ್ಕೆ ಆಹ್ವಾನ, ಪುರುಷರಿಗೆ ಸಹಜವಾದ ಆಕ್ರಮಕ ಪ್ರವೃತ್ತಿಯ ಲಕ್ಷಣಗಳು ಮಹಾದೇವಿಯ ವ್ಯಕ್ತಿತ್ವಕ್ಕೆ ಹೊಂದಿಕೊಳ್ಳಲಾಗದೇ ಹೋದವು. ತನ್ನನ್ನು ವಿವಸ್ತ್ರಗೊಳಿಸಲು ಪ್ರಯತ್ನಿಸಿದ ಕೌಶಿಕನನ್ನು ತಿರಸ್ಕರಿಸಿದ ಮಹಾದೇವಿ ಸ್ವತಃ ವಸ್ತ್ರಗಳ ಹಂಗಿನೊಂದಿಗೆ ಪತಿಯೊಂದಿಗಿನ ವಿವಾಹ ಬಂಧನವನ್ನೂ ಕಳಚಿ ಬಿಸುಟ ಮಹಾದೇವಿಯು ಉಡುತಡಿಗೆ ಹಿಂತಿರುಗುವಳು. ಕೌಶಿಕನು ಬಂದು ಕ್ಷಮೆ ಬೇಡುವನಾದರೂ ಎಂದೋ ಮಹಾದೇವಿ ಐಹಿಕ ಸುಖಗಳಿಗೆ ಬೆನ್ನು ತಿರುಗಿಸಬಲ್ಲ ನಿರ್ಲಿಪ್ತತೆಯನ್ನು ಸಹಜ ಸ್ವಭಾವದಲ್ಲೇ ಹೊಂದಿದ್ದ ಮಹಾದೇವಿ ಪುನಃ ರಾಣಿಯಾಗಿ ಅರಮನೆಯಲ್ಲಿ ಸೆರೆಯಾಗುವ ಪ್ರಶ್ನೆಯೇ ಇರಲಿಲ್ಲ.

ತಂದೆ ತಾಯಿ ಗೆಳತಿಯನ್ನು ಸಂತಯಿಸಿ ತನ್ನ ವೈರಾಗ್ಯದ ಹಾದಿಗೊಂದು ತೋರುಗಂಬವೇ ಆದ ಪತಿಯನ್ನು ಕ್ಷಮಿಸಿ, ಆತನಿಗೆ ಶಿವತತ್ವಗಳನ್ನು ಅರುಹಿದ ಮಹಾದೇವಿಯು 'ಅಕ್ಕ'ನಾಗಿ ಅರಣ್ಯದೆಡೆಗೆ ನಡೆಯುತ್ತಾಳೆ.

ಮಹಾದೇವಿಯಕ್ಕನು ತನ್ನ ನಗ್ನತೆಯನ್ನು ತನ್ನದೇ ಸಮೃದ್ಧ ಕೇಶರಾಶಿಯ ಆಚ್ಛಾದನದಿಂದ ಮುಚ್ಚಿಕೊಂಡಿದ್ದಾದರೂ ಏಕೆ? ಈ ಪ್ರಶ್ನೆ ಮುಂದೆ ಆಕೆಗೆ 'ಅನುಭವ ಮಂಟಪ'ದಲ್ಲಿ ಅಲ್ಲಮಪ್ರಭುವಿನಿಂದ ಕೇಳಲ್ಪಡುತ್ತದೆ. ಆಗ ಅಕ್ಕಮಹಾದೇವಿ ಸೂಕ್ಷ್ಮವಾಗಿ ತಾನು ಭವ ಬಂಧನಗಳನ್ನು ತೊರೆದುಕೊಂಡಿದ್ದರೂ, ತನ್ನ ನಗ್ನತೆಯನ್ನು ಕಂಡು ವಿಚಲಿತರಾಗದಂಥ ಸಂಯಮವವನ್ನು ಎಲ್ಲರಿಂದಲೂ ನಿರೀಕ್ಷಿಸಲಾಗದೇ ಹೀಗೆ ಕೇಶರಾಶಿಯಿಂದ ಮೈಮುಚ್ಚಿಕೊಂಡೆ ಎಂಬರ್ಥದ ಉತ್ತರವನ್ನು ನೀಡುತ್ತಾಳೆ. ಆಕೆ ಪಾಳುಮಂಟಪ ಒಂದರಲ್ಲಿ ತಂಗಿರಬೇಕಾದರೆ ಆಕೆಯ ಮೇಲೆ ಬಲಾತ್ಕಾರದ ಪ್ರಯತ್ನ ನಡೆಯಿತೆಂದೂ ಪ್ರಾಜ್ಞರ ಸಲಹೆಯಂತೆ ಆಕೆ ದೇಹವನ್ನು ಕೇಶಗಳಿಂದ ಮುಚ್ಚಿಕೊಂಡಳೆಂದೂ ಹೇಳಲಾಗುತ್ತದೆ. ಅಕ್ಕಮಹಾದೇವಿಯಲ್ಲಿ ಎಷ್ಟೆಲ್ಲಾ ಪ್ರಶ್ನೆಗಳಿದ್ದವು? ಗೊಂದಲಗಳಿದ್ದವು? ಜಿಜ್ಞಾಸೆಗಳಿದ್ದವು? ವ್ಯಥೆ ಏಕಾಕಿತನ ಭೀತಿ ಒಲಕೋಟಿಗಳು ಕಾಡುತ್ತಿದ್ದವು ಎಂಬುದು ಆಕೆಯ ವಚನಗಳಲ್ಲಿ ಅಭಿವ್ಯಕ್ತಿಗೊಂಡಿದೆ. ಅವೆಲ್ಲಕ್ಕೂ ಪರಿಹಾರ ತಿಳಿಸುವ ಸದ್ಗುರುವನ್ನು ಅರಸುತ್ತಲೇ ಅಕ್ಕಮಹಾದೇವಿ ಬೆಟ್ಟಗುಡ್ಡ ಕಾಡುಮೇಡುಗಳಲ್ಲಿ ಇರುಳು ಹಗಲು ಚಳಿಮಳೆ ಗಾಳಿಗಳ ಭೇದವಿಲ್ಲದೆ ಅಲೆದಳು.

(ಮುಂದುವರಿಯುತ್ತದೆ)

## ನಗೆಹನಿ

**ಏನಿದೆಲ್ಲಾ**

ಟೀಚರ್: ಕಳೆದ ಸೆಮಿಸ್ಟರ್‌ನಲ್ಲಿ ನೀನು ಪ್ರಮೀಳಾ ಜೊತೆ ತಿರುಗಾಡುತ್ತಿದ್ದೆ. ಈ ಸೆಮಿಸ್ಟರ್‌ನಲ್ಲಿ ನೀನು ಶರ್ಮಿಳಾ ಜೊತೆ ತಿರುಗಾಡುತ್ತಿರುವೆ. ಏನಿದೆಲ್ಲಾ?

ಬಾಲು: ಕಂಬೈನ್ಡ್ ಸ್ಟಡಿ ಮಾಡುತ್ತಿದ್ದೇನೆ. ಸಿಲಬಸ್ ಬದಲಾಗಿದೆ ಅಷ್ಟೇ ಟೀಚರ್.



# ಬೆಂಗಳೂರಿನ ನಿರ್ಮಾತೃ ಕೆಂಪೇಗೌಡರು

**ಪ್ರೊ. ಬಿ. ನಾರಾಯಣಮ್ಮ**





ವಿಶ್ವವಿಖ್ಯಾತ ಬೆಂಗಳೂರು ಐಟಿ-ಬಿಟಿ ಕಂಪನಿಗಳ ಸ್ವರ್ಗ ಬೆಂಗಳೂರು. ಜಗತ್ತಿನ ರಾಷ್ಟ್ರಗಳೆಲ್ಲಾ ಬೆಂಗಳೂರಿನತ್ತ ನೋಡುತ್ತಿವೆ. ಉದ್ಯಮಿಗಳಿಗೆ ತಮ್ಮ ಬಂಡವಾಳ ಹೂಡಲು ಕೈಗಾರಿಕೆಗಳನ್ನು ಸ್ಥಾಪಿಸಲು ಸಕಲ ಅನುಕೂಲ ಗಳನ್ನು ಒದಗಿಸುವ ಬೆಂಗಳೂರು ಅವರ ಪಾಲಿನ ಕಲ್ಪವೃಕ್ಷವಾಗಿದೆ. ಸುಂದರ ನಗರ ಬೆಂಗಳೂರಿನಲ್ಲಿ ನೆಲೆಸಲು ಜನ ಕಾತುರರಾಗಿದ್ದಾರೆ. ಹವಾ ನಿಯಂತ್ರಿತ ನಗರವಾದ ಬೆಂಗಳೂರು ಧನಿಕರನ್ನು ಆಕರ್ಷಿಸಿ, ಅವರು ಇಲ್ಲಿಯೇ ನೆಲೆಸುವಂತೆ ಮಾಡುತ್ತಿದೆ. ಇಲ್ಲಿನ ಜನ ಸುಸಂಸ್ಕೃತರು, ಶಾಂತಿಪ್ರಿಯರು, ಸಹೃದಯರು.

ಇಂತಹ ಅದ್ಭುತ ನಗರವನ್ನು ಕಟ್ಟಿದ ಕೀರ್ತಿ ಕೆಂಪೇಗೌಡರದು. ಆಗಿನ ಕಾಲದಲ್ಲಿಯೇ ಭವ್ಯನಗರ ನಿರ್ಮಾಣ ಯೋಜನೆಯನ್ನು ಕೈಗೊಂಡರು. ವ್ಯಾಪಾರಿಗಳನ್ನು ಹೊರರಾಜ್ಯಗಳಿಂದ ಕರೆಸಿ, ಅವರು ಇಲ್ಲಿಯೇ ನೆಲೆಸಲು ಸಕಲ ಸೌಕರ್ಯಗಳನ್ನು ಮಾಡಿಕೊಟ್ಟರು. ಬಳೇಪೇಟೆ, ಗಾಣಿಗರ ಪೇಟೆ, ಅಕ್ಕೀಪೇಟೆ, ಅರಳೇಪೇಟೆ, ಕುಂಬಾರಪೇಟೆ, ತಿಗಳರಪೇಟೆ, ಸುಣ್ಣಕಲ್ಲುಪೇಟೆ ಮುಂತಾದ ಪೇಟೆಗಳನ್ನು ಕಟ್ಟಿಸಿಕೊಟ್ಟು ಆಯಾ ವೃತ್ತಿನಿರತರು ವ್ಯಾಪಾರವನ್ನು ಅಭಿವೃದ್ಧಿ ಪಡಿಸಲು ನೆರವಾದರು.

ಬೆಂಗಳೂರಿನ ಕೋಟೆಯನ್ನು ಕಟ್ಟಿಸಿದರು. ರೈತರಿಗಾಗಿ ಅನೇಕ ಕೆರೆಗಳನ್ನು ನಿರ್ಮಾಣ ಮಾಡಿದರು. ''ದಾನದಲ್ಲಿ ಶಿಬಿಚಕ್ರವರ್ತಿಯೂ, ಸತ್ಯದಲ್ಲಿ ಹರಿಶ್ಚಂದ್ರನೂ ಕರುಣೆಯಲ್ಲಿ ಧರಿತ್ರಿಯೂ, ತಾಳ್ಮೆಯಲ್ಲಿ ಸಾಗರನೂ, ಧೈರ್ಯದಲ್ಲಿ ಹಿಮವಂತನಂತೆಯೂ ಇದ್ದ ಮಹಾನ್ ಚೇತನ ಕೆಂಪೇಗೌಡರನ್ನು ಕನ್ನಡ ನಡಿನ ಜನತೆ ಸದಾ ಸ್ಮರಿಸಬೇಕು.''

ಗವಿಗಂಗಾಧರೇಶ್ವರ ದೇವಾಲಯ, ಅಲಸೂರಿನ ಸೋಮೇಶ್ವರ ದೇವಾಲಯ, ಬಸವಣ್ಣ ದೇವಸ್ಥಾನ, ಆದಿಶಕ್ತಿ ಅಣ್ಣದೇವಿಯ ದೇವಸ್ಥಾನ ಮುಂತಾದ ದೇವಾಲಯ

ಗಳನ್ನು ಕಟ್ಟಿಸಿ, ಅಲ್ಲಿ ಧಾರ್ಮಿಕ ಪೂಜಾವಿಧಿಗಳಿಗೆ ಅನುವು ಮಾಡಿಕೊಟ್ಟರು.

**ಬೆಂಗಳೂರು ಹೆಸರಿನ ಉಲ್ಲೇಖ**

ಬೆಂಗಳೂರು ಇಷ್ಟರಮಟ್ಟಿಗೆ ಬೆಳೆಯುತ್ತದೆ ಎಂದು ಯಾರೂ ಊಹಿಸಿರಲಾರರು. ಬೆಂಗಳೂರು ಎಂಬ ಹೆಸರಿನ ಉಲ್ಲೇಖದ ಬಗ್ಗೆ ಅನೇಕ ಶಾಸನಗಳಿವೆ.

**ಬೇಗೂರಿನ ಶಾಸನ:** ಬೇಗೂರಿನಲ್ಲಿ ದೊರೆತ ಒಂದು ಶಾಸನದಲ್ಲಿ ''ನಾಗತ್ತರನ ಮನೆಮಗಂ ಬುಟ್ಟಣಶೆಟ್ಟಿ ಬೆಂಗಳೂರು ಕಾಳಗದೊಳ್ ಸತ್ತಂ'' ಎಂದಿದೆ. ಅದರಲ್ಲಿ ಬೆಂಗಳೂರಿನ ಉಲ್ಲೇಖವಿದೆ. ಇದು ಒಂಬತ್ತನೆಯ ಶತಮಾನದ ಗಂಗರ ಶಾಸನವಾಗಿದೆ. ಬುಟ್ಟನಶೆಟ್ಟಿ ಎಂಬ ಸೈನಿಕನ ವೀರಮರಣದ ಸ್ಮಾರಕ ಶಿಲೆ ಇದು. ನಾಗತ್ತರನು ಗಂಗರಸರ ಒಬ್ಬ ಅಧಿಕಾರಿ. ಈತ ''ಬೆಂಪೂರು-12'' ಎಂಬ ಪ್ರದೇಶದ ಮಾಂಡಲಿಕನಾಗಿದ್ದನು. ಬೇಗೂರು (ಬೇವೂರು) ನಾಗೇಶ್ವರ ದೇವಾಲಯವನ್ನು ಈತನು ಕಟ್ಟಿಸಿದನು. ಅಂದರೆ ಕ್ರಿ.ಶ. 890ರ ವೇಳೆಗಾಗಲೇ ಬೆಂಗಳೂರು ಎಂಬ ಊರು ಇತ್ತು.

**ಕ್ರಿ.ಶ. 1247ರ ತಮಿಳು ಶಾಸನ:** ಬೆಂಗಳೂರಿನ ಮಡಿವಾಳದ ಸೋಮೇಶ್ವರ ದೇವಾಲಯದ ಕ್ರಿ.ಶ. 1247ರ ಒಂದು ತಮಿಳು ಶಾಸನದಲ್ಲಿ ಬೆಂಗಳೂರಿನ ದೊಡ್ಡಕೆರೆಯ ಕೆಳಗೆ 32 ಖಂಡುಗ ಬತ್ತ ಬೆಳೆಯಬಹುದಾದಷ್ಟು ಗದ್ದೆಯನ್ನು ಐಪ್ಪೂರಿನ ಪೆಮ್ಮಟ್ಟಿಯಾರ್ ಎಂಬುವವರು ಸೋಮೇಶ್ವರ ದೇವಾಲಯಕ್ಕೆ ದಾನವಾಗಿ ನೀಡಿದ ಪ್ರಸ್ತಾಪವಿದೆ. ಬೇಗೂರು ಶಾಸನದಲ್ಲಿ ಉಲ್ಲೇಖಿಸಲ್ಪಟ್ಟಿರುವ ಬೆಂಗಳೂರು ಮತ್ತು ಮಡಿವಾಳ ಶಾಸನದಲ್ಲಿ ಹೇಳಿರುವ ಬೆಂಗಳೂರು ಒಂದೇ ಎಂಬ ಅಭಿಪ್ರಾಯವಿದೆ. ಮಡಿವಾಳವು ಬೇಗೂರಿನಿಂದ ಐದು ಕಿ.ಮೀ. ದೂರದಲ್ಲಿದೆ. ಮಡಿವಾಳದ ಕೆರೆಯ ಕೆಳಗಿನ ಗದ್ದೆಗಳೇ ಮಡಿವಾಳ ಸೋಮೇಶ್ವರ ದೇವಾಲಯಕ್ಕೆ ದಾನವಾಗಿ ದೊರೆತ ಗದ್ದೆಗಳಾಗಿವೆ. ಆ ಗದ್ದೆಗಳು ಭೂ ಸುಧಾರಣಾ ಕಾಯಿದೆ ಜಾರಿಗೆ ಬರುವವರೆಗೆ ಸೋಮೇಶ್ವರ ದೇವಾಲಯದ ವಶದಲ್ಲಿದ್ದವು.

(ಮುಂದುವರಿಯುವುದು)

## ಪರಿಹಾರ

ಹುಡುಗಿಯರಿಬ್ಬರು ಬಸ್ಸಿನಲ್ಲಿ ಖಾಲಿಯಿದ್ದ ಒಂದು ಸೀಟಿಗಾಗಿ ಕಿತ್ತಾಡುತ್ತಿದ್ದರು. ಇದನ್ನು ಗಮನಿಸಿದ ನಿರ್ವಾಹಕನೆಂದ, 'ಜಗಳವಾಡಬೇಡಿ. ಯಾರು ವಯಸ್ಸಿನಲ್ಲಿ ದೊಡ್ಡವರೋ ಅವರು ಕುಳಿತುಕೊಳ್ಳಿ...'

ಅನಂತರ ಪ್ರಯಾಣದುದ್ದಕ್ಕೂ ಹುಡುಗಿಯರು, 'ನೀನು ಕೂತ್ಕೊಳ್ಳಕ್ಕಾ... ನೀನು ಕೂತ್ಕೊಳ್ಳಕ್ಕಾ...' ಎಂದು ಗೋಗರೆಯುತ್ತಿದ್ದರು!

– ಸುನಿತಾ, ಬೆಳಗಾಂ

## ವ್ಯತ್ಯಾಸ

ಒಬ್ಬ ತಾಯಿಗೆ ಒಬ್ಬ ಮಗನನ್ನು ಜಂಟಲ್‌ಮ್ಯಾನ್ ಮಾಡಲು ಇಪ್ಪತ್ತು ವರ್ಷ ಬೇಕು. ಆದರೆ ಒಬ್ಬ ಹುಡುಗಿ ಅದೇ ಹುಡುಗನನ್ನು ಮೆಂಟಲ್‌ಮ್ಯಾನ್ ಮಾಡಲು ಇಪ್ಪತ್ತು ನಿಮಿಷ ಸಾಕು.



# ತಲಕಾಡಿನ ಗಂಗರು (ಕ್ರಿ.ಶ. 350-999)

(ರಾಜಧಾನಿ: ಕೋಲಾಹಲ, ತಲಕಾಡು, ಮಾಕುಂದ)

1. ಚಾಲುಕ್ಯರ ಸಾಮಂತರಾಗಿ (610-757)
2. ರಾಷ್ಟ್ರಕೂಟರ ಸಾಮಂತರಾಗಿ (757-973)
3. ಕಲ್ಯಾಣಿ ಚಾಲುಕ್ಯರ ಸಾಮಂತರಾಗಿ (973-999)

ಕರ್ನಾಟಕದ ಇತಿಹಾಸದಲ್ಲಿ ಗಂಗರ ಆಳ್ವಿಕೆ ಚಿರಸ್ಮರಣೀಯವಾಗಿದೆ. ಅವರು ಆಳಿದ ಪ್ರದೇಶವನ್ನು ಗಂಗವಾಡಿ ಅಥವಾ ಗಂಗನಾಡು ಎಂಬುದಾಗಿ ಕರೆಯಲಾಗಿದೆ. ಗಂಗರು ಸುಮಾರು ಆರು ಶತಮಾನಗಳ ಕಾಲ ಕರ್ನಾಟಕದ ಬಹುಭಾಗವನ್ನು ತಮ್ಮ ಆಳಿಕೆಗೆ ಒಳಪಡಿಸಿಕೊಂಡಿದ್ದರು. ರಾಜ್ಯದ ಭದ್ರತೆಯ ದೃಷ್ಟಿಯಿಂದ ಅನುಕೂಲಕ್ಕೆ ತಕ್ಕಂತೆ ರಾಜಧಾನಿಯನ್ನು ಆಗಿಂದಾಗ್ಗೆ ಬದಲಾಯಿಸುತ್ತಿದ್ದಂತೆ ಕಂಡುಬರುತ್ತದೆ. ಕೋಲಾರ ಅವರ ಮೊದಲ ರಾಜಧಾನಿ. ಹಿಂದೆ ಇದನ್ನು ಕೋಲಾಹರ ಅಥವಾ ಕುವಲಾಲ ಎಂದು ಕರೆಯುತ್ತಿದ್ದರು. ಎರಡನೆಯ ರಾಜಧಾನಿ ತಲಕಾಡು (ಕಾವೇರಿ ನದಿ ತೀರ). ಮೂರನೆಯ ರಾಜಧಾನಿ ಮಾಕುಂದ (ಚನ್ನಪಟ್ಟಣದ ಬಳಿ). ಇವು ಗಂಗರ ರಾಜಧಾನಿಗಳೆನಿಸಿಕೊಂಡಿದ್ದರೂ ತಲಕಾಡು ಅವರ ಪ್ರಧಾನ ಆಡಳಿತ ಕೇಂದ್ರವಾಗಿದ್ದಿತು. ತಲಕಾಡಿನ ಗಂಗರ ಲಾಂಛನ ಅಥವಾ ಮುದ್ರೆ 'ಮದಗಜ'. ಎರಡನೆ ಶತಮಾನಾನಂತರ ಶಾತವಾಹನರು ಪತನದ ಹಾದಿ ತುಳಿದಂತೆ ಅನೇಕ ಸಣ್ಣಪುಟ್ಟ ಮನೆತನಗಳು ತಲೆ ಎತ್ತಿದವು. ಕೋಲಾರದ ಬಳಿ ಬಾಣರೂ, ತಮಿಳುನಾಡಿನಲ್ಲಿ ಪಲ್ಲವರೂ, ಕರ್ನಾಟಕದ ತಲಕಾಡಿನ ಬಳಿ ಗಂಗರೂ ಏಳಿಗೆಗೆ ಬಂದರು.

**ಗಂಗವಂಶದ ಮೂಲಪುರುಷ ದಡಿಗ (ಕ್ರಿ.ಶ. 350-400):** ಇವನಿಗೆ 'ಧರ್ಮ ಮಹಾರಾಜ'ನೆಂಬ ಬಿರುದಿದ್ದಿತು. ಇದರಿಂದ ಅವನು ಸ್ವತಂತ್ರನಾಗಿದ್ದನೆಂದು ವೇದ್ಯವಾಗುತ್ತದೆ. ಗಂಗರಿಗೆ ಕಿರುಕುಳ ಕೊಡುತ್ತಿದ್ದ ಬಾಣರನ್ನು ಸೋಲಿಸಿ 'ಬಾಣವಂಶವನ ದಾವಾನಲ'ನೆಂಬ ಬಿರುದನ್ನು ಪಡೆದನು. ತನ್ನ ಜೈನಗುರು ಸಿಂಹನಂದಿಯ ಇಚ್ಛೆಯ ಮೇರೆಗೆ ಶಿವಮೊಗ್ಗ ಜಿಲ್ಲೆಯ ದುಂಡಲಿ ಎಂಬಲ್ಲಿ ಒಂದು ಚೈತ್ಯಾಲಯವನ್ನು ನಿರ್ಮಿಸಿದನು.

ವಿಷ್ಣುಗೋಪನ ಮಗ ಮೂರನೆಯ ಮಾಧವನಿಂದ ಗಂಗರ ಕಾಲದ ಇತಿಹಾಸ ತಿಳಿಯಲು ಸ್ಪಷ್ಟ ಆಧಾರಗಳು ದೊರೆಯುತ್ತವೆ.

*(ಮುಂದುವರೆಯುವುದು)*

## ಪಂಚದ ಮಹತ್ವ

**ಪಂಚ ಕನ್ಯೆಯರು:** ಅಹಲ್ಯ, ದ್ರೌಪದಿ, ಸೀತೆ, ತಾರ, ಮಂಡೋದರಿ

**ಪಂಚಗವ್ಯಗಳು:** ಗೋಮೂತ್ರ, ಗೋಮಯ, ಕ್ಷೀರ, ದಧಿ, ಘೃತ

**ಪಂಚದ್ರಾವಿಡ ಭಾಷೆಗಳು:** ಕನ್ನಡ, ತಮಿಳು, ತೆಲುಗು, ತುಳು, ಮಲೆಯಾಳಂ

# ನಿಮ್ಮ ಪ್ರಶ್ನೆಗೆ ನಮ್ಮ ಉತ್ತರ

**ಮಂಜುಳಾ, ಕೋಲಾರ**

ಗಂಡು ಕವಿಯಾಗುವುದಕ್ಕೆ ಹೆಣ್ಣಿನ ಮಾತು ಕಾರಣವೋ? ರೂಪ ಕಾರಣವೋ?

ಶೃಂಗಾರ ಕವಿಯಾಗಲು ರೂಪ, ದುರಂತ ಕವಿಯಾಗಲು ಕೋಪ.

**ಸುರೇಶ್, ತುಮಕೂರು**

ಕವನಕ್ಕೂ, ಕದನಕ್ಕೂ ಇರುವ ಸಂಬಂಧ?

ಕವನದಿಂದ ಕಿರಿಕಿರಿ, ಕಿರಿಕಿರಿಯಿಂದ ಕದನ.

**ಅಂಬಿಕಾ, ಬೆಂಗಳೂರು**

ಜೀವನದ ಇಳಿಜಾರಿಗೂ, ಬೆಟ್ಟದ ಇಳಿಜಾರಿಗೂ ಇರುವ ವ್ಯತ್ಯಾಸವೇನು?

ಜೀವನದ ಇಳಿಜಾರಿನಲ್ಲಿ ಅಡ್ಡದಾರಿಯಲ್ಲಿ ಹೋಗಬಾರದು. ಬೆಟ್ಟದ ಇಳಿಜಾರಿನಲ್ಲಿ ನೇರದಾರಿಯಲ್ಲಿ ಹೋಗಬಾರದು.

**ರಮೇಶ್, ಮೈಸೂರು**

ಮೀನಿನ ಬಲೆಗೂ; ಆಸೆಯ ಬಲೆಗೂ ವ್ಯತ್ಯಾಸವೇನು?

ಮೀನಿನ ಬಲೆಗೆ ಸಿಲುಕಿದ್ದಕ್ಕೆ ತೀರುವ ಭಯ, ಆಸೆಯ ಬಲೆಯಲ್ಲಿ ಸಿಲುಕಿದವರಿಗೆ ತೀರದ ಭಯಕೆ!

**ಪಾಂಡುರಂಗ, ಮಂಡ್ಯ**

ಅಯೋಧ್ಯೆ, ದ್ವಾರಕೆ ಎಲ್ಲವೂ ಹೋಟೆಲ್‌ಗಳಾಗಿವೆ. ನಮ್ಮ ರಾಮ, ಕೃಷ್ಣ ಎಲ್ಲಿರುವರು?

ಅಲ್ಲೆಲ್ಲ ಬೇಕಾದ್ದನ್ನು ತಿಂದಿದ್ದರಿಂದ ಈಗ ದೇವಲೋಕದಲ್ಲಿರುವ ಡಾಕ್ಟರ ಹತ್ತಿರವಿರಬೇಕು.

**ಗೀತಾ, ಮೈಸೂರು**

ಕೆಂಪು ಯಾವಾಗಲೂ ಡೇಂಜರ್ ಅಂತ ಗೊತ್ತಿದ್ದರೂ ಊಟಕ್ಕೆ ಉಪ್ಪಿನಕಾಯಿ ಹಾಕ್ತಾರಲ್ಲಾ ಏಕೆ?

ಮೊಸರನ್ನಕ್ಕೆ ಉಪ್ಪಿನಕಾಯಿ ಜೋಡಿ. ಆದ್ದರಿಂದ ಅದು ಡೇಂಜರ್ ಅಲ್ಲ.

**ಸತ್ಯನಾರಾಯಣ, ಶಿವಮೊಗ್ಗ**

ಸತ್ಯ ಯಾವಾಗಲೂ ನಗ್ನವೇಕೆ?

ಸತ್ಯ ಅಸತ್ಯ ಎರಡೂ ಒಟ್ಟಿಗೆ ಸ್ನಾನಕ್ಕೆಂದು ಒಂದೇ ನದಿಯಲ್ಲಿ ಇಳಿದವು. ಅಸತ್ಯ ಮೊದಲು ಸ್ನಾನ ಮಾಡಿ ಸತ್ಯದ ಉಡುಪನ್ನು ಹಾಕಿಕೊಂಡು ಹೋಯಿತು ಅಷ್ಟೇ.

**ಪ್ರಶಾಂತ್, ಹಾಸನ**

ನನ್ನ ಕಣ್ಣಿಗೆ ನಗುವ ಹೆಂಗಸರಿಗಿಂತ ಅಳುವ ಹೆಂಗಸರೇ ಚೆನ್ನಾಗಿ ಕಾಣಿಸ್ತಾರಲ್ಲಾ...?

ಗೊತ್ತಾಯಿತು ಬಿಡಿ, ನೀವು ಟೀವಿ ಸೀರಿಯಲ್ ಪ್ರೊಡ್ಯೂಸರ್. ಅದಕ್ಕೆ ಹೀಗೆ ಕಾಣಿಸುತ್ತೆ.

**ಬೋರಪ್ಪ, ಹೊಸಪೇಟೆ**

ಕರೀ ಎಮ್ಮೆ ಬಿಳೀ ಹಾಲನ್ನೇ ಕೊಡುವುದರ ರಹಸ್ಯವೇನು?

ಹಾಲಿನ ಉತ್ಪಾದನೆಯಲ್ಲಿ ಬಿಳಿ ಇಷ್ಟು ಕಪ್ಪು ಇಷ್ಟು ಎಂದು ತೋರಿಸಲು ಅದು ಎಮ್ಮೆಲ್ಲೆಯಲ್ಲ, ಅದು ನಿಮ್ಮ ಪ್ರಾಮಾಣಿಕ ಎಮ್ಮೆ.

**ರಾಮಮೂರ್ತಿ, ದಾವಣಗೆರೆ**

ಅತ್ತೆ ಸೊಸೆ ಜಗಳ ನಿಲ್ಲಿಸಲು ಉಪಾಯವೇನು?

ಇಬ್ಬರ ವಾಟ್ಸಪ್‌ಗೂ ಅವರಿಗೆ ತಕ್ಕಂತಹ ಗಾಸಿಪ್ ಸುದ್ದಿಯನ್ನು ಕಳಿಸಿ ನೋಡಿ. ಎಷ್ಟೊಂದು ಮೌನವಾಗಿರುತ್ತೆಂದು ತಿಳಿಯುತ್ತೆ.



# ಯಮಲೋಕದಲ್ಲಿ ಪತ್ರಕರ್ತ



(ಹಿಂದಿನ ಸಂಚಿಕೆಯಿಂದ)

ನಾರದ: ರಾಮಸಿಂಹಯ್ಯ, ಇಬ್ಬರೂ ಬಿದ್ದಿರುವ ಜಾಗವನ್ನು ಹುಡುಕಲು ಹೊರಟರು. ಕಿಸ್ ಕೊಟ್ಟು ಬಿದ್ದಿರುವ ಜಾಗದಲ್ಲಿ ಬಾಡಿಯೇ ಇರಲಿಲ್ಲ. ಇಬ್ಬರಿಗೂ ಗಾಬರಿಯಾಯಿತು. ಇಬ್ಬರೂ ಚಾಮುಂಡಿ ಬೆಟ್ಟದ ಕಡೆ ಹೊರಟರು. ರಸ್ತೆಯಲ್ಲಿ ಸಾಗುತ್ತಾ ಮೂಲೆಯಲ್ಲೊಂದು ಬಾರ್ ಕಾಣಿಸಿತು. ಇಬ್ಬರೂ ಒಳಹೋಗಿ ಮಿಣಿಮಿಣಿಯಂತೆ ಹೊಳೆಯುತ್ತಿದ್ದ ಲೈಟಿನ ಕೆಳಗೆ ಕುರ್ಚಿ ಎಳೆದುಕೊಂಡು ಕುಳಿತರು. ಒಬ್ಬ ವೈಟರ್ ಬಂದು ಟೇಬಲ್ಲಿನ ಮೇಲೆ ಒಂದು ಚಿಕ್ಕ ಪುಸ್ತಕ ಕುಕ್ಕಿದ.

ರಾಮಸಿಂಹಯ್ಯ: ಕುಕ್ಕಿದ ಪುಸ್ತಕವನ್ನು ತೆಗೆದುಕೊಂಡು ತನಗೆ ಬೇಕಾದ ಐಟಂಗೆ ಗುರುತು ಹಾಕಿದ ಏಯ್ ವೈಟರ್ ಬಾಯಿಲ್ಲಿ.

ವೈಟರ್: ಟೇಬಲ್ ಮುಂದೆ ಬಂದು ನಿಂತ. ಪುಸ್ತಕವನ್ನು ತೆಗೆದು ನೋಡಿದ. ರಂ ಎಂದು ಬರೆದಿತ್ತು. ಒಂದು ಚಿಕ್ಕದೊಂದು ಸೀಸ ಎರಡು ಗಾಜಿನ ಲೋಟವನ್ನು ತಂದು ಇಬ್ಬರೂ ಕುಳಿತಿರುವ ಟೇಬಲ್ ಮೇಲೆ ಕುಕ್ಕಿದ.

ನಾರದರು: ಟೇಬಲ್ ಮೇಲೆ ಕುಕ್ಕಿದ ರಂ ಬಾಟಲನ್ನು ಕೈಯಲ್ಲಿ ಹಿಡಿದುಕೊಂಡು ರಾಮಸಿಂಹಯ್ಯನವರೇ ರಂ ಎಂದು ಬರೆದಿದೆಯಲ್ಲಾ ಇದರ ಅರ್ಥವೇನು? ಎಂದು ಕೇಳಿದರು.

ರಾಮಸಿಂಹಯ್ಯ: ನಾರದರೆ ರಂ ಎಂದರೆ ರಂಭೆ, ಊರ್ವಶಿ, ಮೇನಕೆ ಎಂದು ಹೇಳಿದ.

ನಾರದ: ಬಾಟಲಿನ ಮುಚ್ಚಳ ತೆಗೆದು ಗಟಗಟನೆ ಸೋಡಾ ಹಾಕಿಕೊಳ್ಳದೆ ಕುಡಿದೇಬಿಟ್ಟರು. ಕುಡಿದ ನಿಮಿಷದಲ್ಲೇ ಏಯ್ ಎಲ್ಲೋ ಫಿಗರ್ ರಂಭೆ, ಮೇನಕೆ, ಊರ್ವಶೀನ ತೋರಿಸ್ತೀನಿ ಅಂತ ಎಣ್ಣೆ ಹೊಡಿಸ್ಬಿಟ್ಯಾ. ಆಹಾ ಸುರಲೋಗದ ಸುಂದರಿಯರು ನನ್ನ ಹೃದಯದಲ್ಲಿ ಸಂಚರಿಸುತ್ತಿದ್ದಾರೆ. ವ್ಹಾ ಅಗೋ ಬಂದಳು ರಂಭೆ, ಕೈ ಹಿಡಿದಳು ಊರ್ವಶಿ, ಹೃದಯ ಅಪ್ಪಿದಳು ಮೇನಕೆ, ವ್ಹಾಟ್ ಸೂಪರ್ ಇನ್ ರಂ.

ರಾಮಸಿಂಹಯ್ಯ: ಎಲಾ ನಾರದ, ನೀನ್ಯಾವಾಗ ಕಲಿತ್ಕೊಂಡೆ ಎಣ್ಣೆ ಹೊಡೆಯೋದು ಎಂದು ಕೇಳಿದನು. ನಮ್ಮ ಭೂಲೋಕದ ರಂಭೆ, ಮೇನಕೆ, ಊರ್ವಶೀನ ತೋರಿಸ್ತೀನಿ ಅಂತ ಹೇಳಿದ.

ನಾರದ: ಏನೋ ಲೋ ಭೂಲೋಕದ ರಂಭೆ ಊರ್ವಶೀನ ತೋರಿಸ್ತ್ಯಾ ನೀನು. ನಮ್ಮ ಲೋಕದಲ್ಲಿರುವ ಹುಡುಗಿಯರಿಗಿಂತ ನಿಮ್ಮ ಲೋಕದಲ್ಲಿರುವ ಹುಡುಗಿಯರು ಸುಂದರೀರೋ ಬಡ್ಡೀಗಂಡ್ನೆ. ತೋರಿಸ್ಲಾ ಅವರ್‍ಗೆಲ್ಲಾ ಒಂದು ಕೈ ನೋಡ್ತೀನಿ ಅಂತ ಹೇಳಿ ಬಾಟ್ಲನ್ನ ತೆಗೆದು ರೊಯ್ಯನೆ ಬೀಸಿಟ್ಟ, ಆ ಬಾಟ್ಲು ಜಂಪಾಗಿ ಜಂಪಾಗಿ ಅಲ್ಲೊಂದು ಪಾರ್ಟಿ ನಡೀತಿತ್ತು. ಆ ಪಾರ್ಟಿ ಮಧ್ಯದಲ್ಲಿ ಹುಡುಗಿಯರ ಗುಂಪಿತ್ತು. ಗುಂಪಿನ ಮಧ್ಯದಲ್ಲಿ

ಬಾಟ್ಲು ದಡಾರನೆ ಬಿತ್ತು. ಎಲ್ರೂ ಗಾಬ್ರಿಯಿಂದ ಚಲ್ಲಾಪಿಲ್ಲಿಯಾದರು.

ನಾಕೈದ್ ಜನ ಹುಡುಗೀರು ನಾಕ್ಜನ ಹುಡುಗ್ರು ಗುಂಪು ಕಟ್ಕಂಡು ರಾಮಸಿಂಹಯ್ಯನ ಟೇಬಲ್ ಹತ್ರ ಬಂದು ನಿಂತ್ಕಂಡು, ಏನ್ರೀ ನಿಮಗೆ ಗೊತ್ತಾಗಲ್ವಾ, ಪಾರ್ಟಿ ನಡೀತಾ ಇದೆ ಅಂತ. ನಿಮಗಿಷ್ಟ ಬಂದಂಗೆ ಬಿಸಾಕಕ್ಕೆ ಇದೇನು ನಿಮ್ಮತ್ತೆ ಮನೆನಾ ಅಂತ ಒಬ್ರುಗೊಬ್ರು ಒಂದೊಂದು ರೀತಿ ಸ್ವಲ್ಪವೂ ಫುಲ್‌ಸ್ಟಾಪ್ ಇಲ್ಲದೆ ಗುಂಡಿನ ಮತ್ತಿನಲ್ಲಿ ಬೈತಾ ಇದ್ರು.

ನಾರದ: ಲೇ ಸಿಂಹ, ಯಾರೋ ಈ ಕೋಡಂಗಿಗಳು ನಮ್ಮನ್ನ ಸುತ್ತಾಕಂಡವ್ರೆ ಅವರ್ಗೆ ಒದೆ ಗಿದೆ ಬೇಕಾ ಕೇಳು. ನಮ್ಮ ಯಮನ ಗದೆಯಿಂದ ಇಕ್ಕ್‌ದ್ರೆ ಗಾಳೀಗೆ ತೂರ್‍ಕೊ ಒಯ್ತಾರೆ ತಿಳಿತೋ.

ರಾಮಸಿಂಹಯ್ಯ: ಸಾರಿ ಫ್ರೆಂಡ್ಸ್, ಈ ಬಡ್ಡೀಮಗ ಒಂದು ಕ್ವಾರ್ಟ್ರು ಕುಡ್ದಿಲ್ಲ ಈಗ್ಲೆ ನೆತ್ತಿಗೇರೈತೆ. ಸಾರಿ ಸಾರಿ. ನೀವೆಲ್ಲಾ ಪಾರ್ಟಿ ಮಾಡ್ಕೊಳ್ಳಿ ಹೋಗಿ. ತಕ್ಷಣ ನಾರದರನ್ನು ಎಳೆದುಕೊಂಡು ಒಂದು ರೂಂನಲ್ಲಿ ಕೂಡಾಕುದ್ರು. ಸುಂದರವಾದ ಬೆಡ್‌ನ ಮೇಲೆ ಮಲ್ಕೊಂಡು ಬಿಟ್ರು. ನಾಲ್ಕೈದು ಜನರ ತಂಡ ರಾಮಶಾಸ್ತ್ರಿಗಳೇ ರಾಮಶಾಸ್ತ್ರಿಗಳೇ ನಿಮ್ಮಗನ್ಗೆ ಕಾರ್ ಆಕ್ಸಿಡೆಂಟ್ ಆಗಿ ಪ್ರಜ್ಞೆ ತಪ್ಪೋಗಿದೆ. ಅವ್ನನ್ನ ದೊಡ್ಡಾಸ್ಪತ್ರೆಗೆ ಸೇರ್‍ಸಿದೀವಿ. ಡಾಕ್ಟ್ರು ಏನೂ ಹೇಳಕ್ಕಾಗಲ್ಲ ಅಂತ ಹೇಳ್ಬಿಟ್ಟಿದ್ದಾರೆ. ಇದರ ಮೇಲೆ ಏನಾಗುತ್ತೋ ಗೊತ್ತಿಲ್ಲ ಅಂತ ಹೇಳಿ ಆ ನಾಲ್ಕೈದು ಜನರು ಜಾಗ ಖಾಲಿ ಮಾಡಿದರು.

ರಾಮಶಾಸ್ತ್ರಿಗಳು: ಮೊಟದಲೇ ರಿಟೈರ್ಡ್ ಸ್ಕೂಲ್ ಟೀಚರ್, ಬರುವ ಪೆನ್ಷನ್‌ನಿಂದ ಜೀವನ ಸಾಗ್ಸೋದೇ ಆಗ್ತಾ ಇಲ್ಲ. ಮಗಳಿಗೆ ಬೇರೆ ಮದುವೆ ಮಾಡಬೇಕು. ಇವ್ನೀ ತರ ಆಕ್ಸಿಡೆಂಟ್ ಮಾಡ್ಕೊಂಡು ಕೂತಿದಾನಲ್ಲ. ಇನ್ನೇನು ಗ್ರಹಚಾರ ಕಾದಿದ್ಯೋ ನನಗೆ. ಲೇ ಮನೆ ಬಾಗ್ಲಾಕ್ಕೊಳ್ಳೆ. ನಾನು ಆಸ್ಪತ್ರೆಗೆ ಹೋಗಿ ನೋಡ್ಕೊಂಡು ಬರ್‍ತೀನಿ. ರಮ್ಯ ಏನಾದ್ರೂ ಬಂದ್ರೆ ಅವಳ್ಗೆ ಹೇಳು ಆಸ್ಪತ್ರೆಗೆ ಹೋಗಿದ್ದಾರೆ ಅಪ್ಪ ಅಂತ. ಹೆಂಡ್ತಿ ಸೀತನಿಗೆ ಹೇಳ್ದ ಶಾಸ್ತ್ರಿಗಳು ದಭದಭನೆ ಹೆಜ್ಜೆ ಹಾಕ್ಕೊಂಡು ದೊಡ್ಡಾಸ್ಪತ್ರೆ ಸೇರುದ್ರು. ವಿಚಾರಣಾ ಕೊಠಡಿ ಹತ್ರ ಬಂದು ರಾತ್ರಿ ಆಕ್ಸಿಡೆಂಟ್ ಆಯ್ತಲ್ಲಾ ಆ ಹುಡುಗನ ಯಾವ ವಾರ್ಡ್‌ನಲ್ಲಿ ಸೇರ್‍ಸಿದ್ದಾರೆ ಅಂತ ಕೇಳುದ್ರು.

ವಿಚಾರಣಾ ವ್ಯಕ್ತಿ: ನಿಮ್ಮ ಹೆಸ್ರೇನು, ನಿಮ್ಮ ಹುಡ್ಗನ ಹೆಸ್ರೇನು ಅಂತ ಕೇಳ್ದ.

*(ಮುಂದುವರಿಯುವುದು)*

**Sorry Sorry Sorry**

Happy Happy New Year

Marry Marry This Year

Baby Baby next year

Sorry Sorry Dear.

***Praneeth***

**Love Means**

L – loss of Life

O – Out of mind

V – Waste of time

E – End of Life

***by Bhoomika, B'lore***





# ರುದ್ರಾಕ್ಷಿಗಳು ಹಾಗೂ ಅದರ ಮಹಿಮೆ

**19. ಏಕೋನವಿಂಶತಿ ರುದ್ರಾಕ್ಷಿ:** ಹತ್ತೊಂಬತ್ತು ಮುಖಗಳುಳ್ಳ ರುದ್ರಾಕ್ಷಿ ಸಾಕ್ಷಾತ್ ನಾರಾಯಣನ ಸಾಕಾರ ರೂಪ. ಅದನ್ನು ಧರಿಸಿದರೆ ಲೌಕಿಕ ಆಸೆ ಆಕಾಂಕ್ಷೆಗಳು ಈಡೇರುತ್ತವೆ. ವಾಣಿಜ್ಯೋದ್ಯಮಿಗಳಲ್ಲಿ ವ್ಯಾಪಾರಿ ಬುದ್ಧಿಯನ್ನು ಚುರುಕುಗೊಳಿಸುತ್ತದೆ.

**20. ವಿಂಶತಿ ಮುಖಿ ರುದ್ರಾಕ್ಷಿ:** ಇಪ್ಪತ್ತು ಮುಖಗಳುಳ್ಳ ರುದ್ರಾಕ್ಷಿ ಬ್ರಹ್ಮನ ಸಂಕೇತವಾಗಿದೆ. ಅದು ಜ್ಞಾನವನ್ನು ವೃದ್ಧಿಸುತ್ತದೆ. ಮಾನಸಿಕ ಶಾಂತಿ ನೀಡುತ್ತದೆ. ದೃಗಶಕ್ತಿಯನ್ನು ಸುಧಾರಿಸುತ್ತದೆ.

**21. ಏಕವಿಂಶತಿ ಮುಖಿ ರುದ್ರಾಕ್ಷಿ:** ಇಪ್ಪತ್ತೊಂದು ಮುಖಗಳುಳ್ಳ ರುದ್ರಾಕ್ಷಿ ಕುಬೇರನ ಪ್ರತೀಕ ಎನ್ನುತ್ತಾರೆ. ಪ್ರಾಪಂಚಿಕ ಸುಖಭೋಗ ಪಡೆಯಲು ಇದನ್ನು ಧರಿಸಬೇಕು. ಆದರೆ ಈ ಜಾತಿಯ ರುದ್ರಾಕ್ಷ ಅತ್ಯಂತ ಅಪರೂಪವಾದ ವಸ್ತು ಮತ್ತು ದೊರೆಯುವುದು ದುರ್ಲಭ. ಇಪ್ಪತ್ತೊಂದು ಮುಖವುಳ್ಳ ರುದ್ರಾಕ್ಷಿಗಳ ಮಾಲೆಯನ್ನು ಇಂದ್ರಮಾಲೆ ಎಂದು ಕರೆಯುತ್ತಾರೆ. ಈ ಮಾಲೆಯಲ್ಲಿ 21 ರುದ್ರಾಕ್ಷಿಗಳಿರುತ್ತವೆ. ಈ ಜಾತಿಯ ಒಂದೆರಡು ರುದ್ರಾಕ್ಷಿಗಳು ದೊರೆಯುವುದೇ ಕಷ್ಟವಾದುದರಿಂದ 21 ರುದ್ರಾಕ್ಷಿಗಳ ಮಾಲೆಯನ್ನು ಧರಿಸುವುದು ಅಸಂಭವವೇ ಸರಿ.

ಮೇಲೆ ಹೇಳಿದ ಒಂದರಿಂದ ಇಪ್ಪತ್ತೊಂದು ಮುಖಗಳುಳ್ಳ ರುದ್ರಾಕ್ಷಿಗಳಲ್ಲದೆ ಗೌರಿಶಂಕರ ಎಂಬ ಒಂದು ಜಾತಿಯ ರುದ್ರಾಕ್ಷಿಯೂ ದೊರೆಯುತ್ತದೆ. ಎರಡು ರುದ್ರಾಕ್ಷಿಗಳು ಒಂದಕ್ಕೊಂದು ಅಂಟಿಕೊಂಡಿರುವ ರುದ್ರಾಕ್ಷಿಯೇ ಗೌರಿಶಂಕರ ರುದ್ರಾಕ್ಷಿ. ಇದನ್ನು ಯೋಗಿಗಳೂ ಮಠಾಧಿಪತಿಗಳೂ, ಋಷಿಮುನಿಗಳೂ, ಭಕ್ತರೂ ಧರಿಸುತ್ತಾರೆ. ಇದು ಶಿವ ಶಕ್ತಿ ಸ್ವರೂಪದ್ದಾಗಿರುವುದರಿಂದ ಇದನ್ನು ಧರಿಸಿದವರಿಗೆ ಸರ್ವ ವಿಧದಲ್ಲಿಯೂ ಜಯ ಲಭಿಸುತ್ತದೆ. ಕೀರ್ತಿವಂತರಾಗುತ್ತಾರೆ. ಸಕಲ ಸಂಪತ್ತುಗಳೂ ದೊರೆಯುತ್ತವೆ. ಜ್ಞಾನ ವೈರಾಗ್ಯಗಳು ಪ್ರಾಪ್ತವಾಗುತ್ತವೆ.

ರುದ್ರಾಕ್ಷಿಯನ್ನು ಧರಿಸಿದ ವ್ಯಕ್ತಿಯು ಕೆಲವು ನಿಯಮಗಳನ್ನು ಅನುಸರಿಸಬೇಕಾಗುತ್ತದೆ. ಜೀವನದಲ್ಲಿ ಅನೇಕ ಮಾರ್ಪಾಟುಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ತುಂಬಾ ನಿಯಮ ನಿಷ್ಠೆಗಳಿಂದ ಇರಬೇಕಾಗುತ್ತದೆ.

*ಮದ್ಯಂ ಮಾಂಸಾಂ ಚ ಲಶುನಂ*
*ಪಲಾಂಡುಂ ಶಿಗ್ರುಮೇವಚ*
*ಶ್ಲೇಷಾತ್ಮಕಂ ವಿಡ್ವರಾಹಂ*
*ಅಭಕ್ಷ್ಯಯಂ ವರ್ಜಯೇನ್ನರಃ*

ಮಾದಕ ಪದಾರ್ಥಗಳಾದ ಹೆಂಡ ಸಾರಾಯಿ ಮುಂತಾದವುಗಳನ್ನು ಸೇವಿಸಬಾರದು. ಮಾಂಸ, ಬೆಳ್ಳುಳ್ಳಿ, ಈರುಳ್ಳಿ ತಾಮಸಾಹಾರಗಳನ್ನು ಉಪಯೋಗಿಸಬಾರದು. ಪರಸ್ತ್ರೀ ಸಂಗ ಮಾಡಬಾರದು.

(ಮುಗಿಯಿತು)

ಫೆಬ್ರವರಿ 2017ರಲ್ಲಿ ನಮ್ಮ ಮಹಿಳಾ ವಿಶೇಷ ಬಳಗ ಹಾಗೂ ಸ್ನೇಹಿತರುಗಳ ಹುಟ್ಟುಹಬ್ಬದ ಪ್ರಯುಕ್ತ ಮೈಸೂರಿನ ಅಧಿದೇವತೆ ಚಾಮುಂಡೇಶ್ವರಿ ಇವರುಗಳಿಗೆ ಆಯುರಾರೋಗ್ಯ ಐಶ್ವರ್ಯಗಳನ್ನು ಕರುಣಿಸಲಿ ಎಂದು ಕೋರುತ್ತಾ, ಪತ್ರಿಕಾ ಬಳಗವು ಶುಭವನ್ನು ಕೋರುತ್ತಿದೆ.

1. ಕಲಾಶ್ರೀ, ಶಿವಮೊಗ್ಗ
2. ಜಯಂತಿಕಾ, ದೊಡ್ಡಬಳ್ಳಾಪುರ
3. ನಯನಾ, ಸೋಮವಾರಪೇಟೆ
4. ಪಂಕಜಾಕ್ಷಿ, ಮೈಸೂರು
5. ಬಿಂದುಮಣಿ, ಮೇಲುಕೋಟೆ
6. ಅನುರಂಜಿನಿ, ಕಡೂರು
7. ಕಾತ್ಯಾಯಿನಿ, ಕಾರವಾರ
8. ರಮಾದೇವಿ, ಬಳ್ಳಾರಿ
9. ಶಾಂಭವಿ, ಬೆಂಗಳೂರು
10. ಹೇಮಮಾಲಿನಿ, ಧಾರವಾಡ
11. ಚಿತ್ರಾವತಿ, ಚಿಕ್ಕಮಗಳೂರು
12. ಗುಣಸುಂದರಿ, ಕುಂದಾಪುರ
13. ಸುಶೋಭಿತಾ, ಮಂಗಳೂರು
14. ವಿಜಯಲಕ್ಷ್ಮಿ, ಕೋಲಾರ
15. ಕಾಂಚನಮಾಲಾ, ಬೆಂಗಳೂರು
16. ಉಷಾಕುಮಾರಿ, ಮಂಡ್ಯ
17. ಪ್ರಿಯಂವದಾ, ಮಂಗಳೂರು
18. ದೀಪಮಾಲಾ, ಮೈಸೂರು
19. ಜಯಮಾಲಾ, ತೀರ್ಥಹಳ್ಳಿ
20. ಚಂದ್ರಾ, ಅರಸೀಕೆರೆ
21. ದಾಮಿನಿ, ಬೆಂಗಳೂರು
22. ನಮ್ರತಾ, ಹಾಸನ
23. ಬೃಂದಾದೇವಿ, ಮೈಸೂರು
24. ಅಮೃತೇಶ್ವರಿ, ತುಮಕೂರು
25. ಪದ್ಮಮಾಲಾ, ಕನಕಪುರ
26. ಧಾರಾಮಣಿ, ಮಂಡ್ಯ
27. ತೇಜಶ್ರೀ, ಶಿವಮೊಗ್ಗ
28. ಜ್ಞಾನಾಂಬಿಕಾ, ಹೊಸಪೇಟೆ

## ಬ್ಲಾಸಮ್ ಸ್ಕೂಲ್

### ಬಾಳ್ಳುಪೇಟೆ, ಸಕಲೇಶಪುರ ತಾ., ಹಾಸನ ಜಿಲ್ಲೆ




ಶಾಲೆಯ ವಾರ್ಷಿಕೋತ್ಸವ ದಿ. 28-1-2017ರಂದು ಶಾಲೆಯ ಸಭಾಂಗಣದಲ್ಲಿ ವಿಜೃಂಭಣೆಯಿಂದ ನಡೆಯಿತು. ಕಾರ್ಯಕ್ರಮದ ಮುನ್ನಾದಿನ ಆಟೋಟಗಳಲ್ಲಿ ಬಹುಮಾನ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ನೀಡಲಾಯಿತು. ಚಿತ್ರದಲ್ಲಿ ಎಡದಿಂದ ಬಲಕ್ಕೆ ಆಸೀನರಾಗಿರುವವರು ಶ್ರೀಮತಿ ಹೆಲೆನ್, ಶ್ರೀಮತಿ ಪ್ರಮೀಳಾ ಧರ್ಮಪ್ರಕಾಶ್, ಶ್ರೀಮತಿ ಪ್ರೀತಿ ಮೋಹನ್, ಶ್ರೀಮತಿ ಯಶೋದಾ ಸಿದ್ದಣ್ಣ ಹಾಗೂ ಶ್ರೀ ಸಿದ್ದಣ್ಣ, ಶಾಲಾ ಕಾರ್ಯದರ್ಶಿ.



## ನಿಮ್ಮ ಆರೋಗ್ಯ ನಿಮ್ಮ ಕೈಯಲ್ಲೇ ಇದೆ

ಕೃಪೆ: ಡಾ. ಕೆ. ರಾಮಚಂದ್ರ, ಮಂಡ್ಯ

# ಸಕ್ಕರೆ ಕಾಯಿಲೆ ಮತ್ತು ಅದರ ವ್ಯಾಪ್ತಿ

**9. ಜಾಹೀರಾತುಗಳ ಪ್ರಭಾವದಿಂದ ಔಷಧಿಗಳನ್ನು ನಿಲ್ಲಿಸಿ ತೊಂದರೆಗೆ ಗುರಿಯಾಗುವುದು**

ಇತ್ತೀಚಿನ ದಿನಗಳಲ್ಲಿ ಜಾಹೀರಾತುಗಳಿಂದ ಜನರನ್ನು ಎಷ್ಟು ಮೂರ್ಖರನ್ನಾಗಿ ಮಾಡಿ ಹಣ ಮಾಡಬಹುದೋ ಅಷ್ಟನ್ನೂ ಈ ಜಾಹೀರಾತುಗಳು ಮಾಡುತ್ತಿವೆ. ದೂರದರ್ಶನದಲ್ಲಿ ಅನೇಕ ಬಾರಿ ನೀವು ದಿನನಿತ್ಯ ನೋಡುವುದು ಇಂತಹ ಜಾಹೀರಾತುಗಳನ್ನೇ. ಜನರು ಎಷ್ಟು ಸುಲಭವಾಗಿ ಮರುಳಾಗುತ್ತಾರೆಂದರೆ 500 ಮಿ.ಗ್ರಾಂ. ಸಕ್ಕರೆ ಅಂಶ 2 ದಿನಗಳಲ್ಲೇ ಇಳಿದುಬಿಡುತ್ತದೆ ಹಾಗೂ ವ್ಯಕ್ತಿ ಭೀಮನ ರೀತಿ ಬಲಶಾಲಿಯಾಗಿ ಬಿಡುತ್ತಾನೆ ಇತ್ಯಾದಿ. ಇಂತಹ ಔಷಧಿಗಳ ಜಾಹೀರಾತು ನೋಡಿದ ಅನೇಕ ರೋಗಿಗಳು ಮರುಳಾಗಿ ತಾವು ತೆಗೆದುಕೊಳ್ಳುತ್ತಿರುವ ಔಷಧಿಗಳನ್ನು ನಿಲ್ಲಿಸಿ ಇಂತಹ ಪ್ರಯೋಗಗಳನ್ನು 3-4 ತಿಂಗಳು ಮಾಡಿಅನಂತರ ಮೊದಲಿಗಿಂತ ಹೆಚ್ಚು ಸಕ್ಕರೆ ಅಂಶವನ್ನು ರಕ್ತದಲ್ಲಿ ಗುರುತಿಸಿಕೊಂಡು ಸಣ್ಣಪುಟ್ಟ ತೊಂದರೆಗಳನ್ನು ಮಾಡಿಕೊಂಡು ಬರುತ್ತಾರೆ. ಈಗಿನ ದಿನಗಳಲ್ಲೂ ಜನ ಎಷ್ಟು ನಂಬಿಕೆ ಇಡುತ್ತಾರೆ ಎಂಬುದು ವಿಸ್ಮಯಕಾರಿ ಸಂಗತಿಯಾಗಿದೆ. ಯಾವುದೇ ಔಷಧಿ ಉಪಯೋಗಿಸಿದರೂ ಅದರಲ್ಲಿ ವೈಜ್ಞಾನಿಕ ಕಾರಣಗಳಿದ್ದು ಸಂಶೋಧನೆ ನಡೆಸಿ ಪ್ರಕಟಿಸಿರಬೇಕು. ಇದರಿಂದ ಖಾಯಿಲೆಗೆ ಧೈರ್ಯವಾಗಿ ಔಷಧಿಗಳನ್ನು ಉಪಯೋಗಿಸಬಹುದು. ಇದಲ್ಲದೆ ಕೇವಲ ದೂರದರ್ಶನದ ಜಾಹೀರಾತು ನೋಡಿ ಔಷಧಿ ಗುಣಪಡಿಸುತ್ತೆ ಎಂದು ನಂಬುವುದು ಮೂರ್ಖತನ. ಆದುದರಿಂದ ಯಾವುದೇ ರೋಗಿಯೂ ತಾನು ತೆಗೆದುಕೊಳ್ಳುತ್ತಿರುವ ಔಷಧಿಯನ್ನು ನಿಲ್ಲಿಸಿ ವೈದ್ಯರಿಗೂ ತಿಳಿಸದೆ 3-4 ತಿಂಗಳು ಉಪಯೋಗಿಸಿ ನಂತರ ತೊಂದರೆಗಳಿಗೆ ಒಳಗಾಗಿ ಪಶ್ಚಾತ್ತಾಪ ಪಡಿಸಬಾರದು. ಆದುದರಿಂದ ಯಾವುದನ್ನು ಮಂತ್ರದಿಂದ ಮಾಡಲು ಸಾಧ್ಯವಿಲ್ಲ.

**10. ಖೊಟ್ಟಿ ವೈದ್ಯರಿಂದ ಲೇಹ್ಯ, ಭಸ್ಮ ಉಪಯೋಗಿಸುವುದು ಹಾಗೂ ಲೈಂಗಿಕ ಸಮಸ್ಯೆಗೆ ಪರಿಹಾರ ಹುಡುಕುವುದು**

ಇದು ಸಹ ದಿನನಿತ್ಯ ನಾವು ಕಾಣುವ ಜಾಹೀರಾತುಗಳು. ಪುಣ್ಯವೆಂದರೆ ಇದು ಪತ್ರಿಕೆಗಳಲ್ಲಿ ಮಾತ್ರ ಕಂಡುಬರುತ್ತಿದೆ. ದೂರದರ್ಶನದಲ್ಲಿ ಕಂಡುಬರುತ್ತಿಲ್ಲ. ಇಂತಹ ಆಯುರ್ವೇದ ಭಸ್ಮದಿಂದ, ಇಂತಹ ಮೂಲಿಕೆಗಳಿಂದ ಖಾಯಿಲೆ ಸಂಪೂರ್ಣವಾಗಿ ಗುಣವಾಗುತ್ತದೆ ಇತ್ಯಾದಿ. ಎಲ್ಲಕ್ಕಿಂತ ಮುಖ್ಯವಾಗಿ ಲೈಂಗಿಕ ಸಮಸ್ಯೆಗೆ ಪರಿಹಾರ. ಇದು ಬಹಳ ಮುಖ್ಯವಾದ ವಿಷಯ. ಹೆಚ್ಚಿನ ನಮ್ಮ ರೋಗಿಗಳು ಲೈಂಗಿಕ ವಿಷಯಗಳು ಬಂದಾಗ ಸರಿಯಾಗಿ ವೈದ್ಯರ ಹತ್ತಿರ ತಮ್ಮ ಸಮಸ್ಯೆಗಳನ್ನು ಹೇಳುವುದಿಲ್ಲ. ಮಧುಮೇಹ ಸರಿಯಾಗಿ ನಿಯಂತ್ರಿಸದಿದ್ದರೆ ಎಲ್ಲಾ ಸಮಸ್ಯೆಗಳಂತೆ ಲೈಂಗಿಕ ಸಮಸ್ಯೆಯು ಕಂಡುಬರುತ್ತದೆ.

(ಮುಂದುವರಿಯುತ್ತದೆ)

# ಚಂದಾ ವಿವರ

ಈ ಕೆಳಗೆ ತಿಳಿಸಿರುವ ಮೊಬಲಗಿನಲ್ಲಿ ಅಂಚೆವೆಚ್ಚ ಹಾಗೂ ವೆಬ್‌ಸೈಟ್ ವೆಚ್ಚವು ಸೇರಿರುತ್ತದೆ. ದಯಮಾಡಿ ಪತ್ರಿಕೆಗೆ ಚಂದಾದಾರರಾಗಿ, ಪ್ರೋತ್ಸಾಹಿಸಿ. ಪತ್ರಿಕೆಯನ್ನು ಬೆಳೆಸಿ.

| | |
|---|---|
| ಎರಡು ವರ್ಷದ ಸದಸ್ಯತ್ವಕ್ಕೆ | ರೂ. 301/- |
| ಐದು ವರ್ಷದ ಸದಸ್ಯತ್ವಕ್ಕೆ | ರೂ. 751/- |
| ಹತ್ತು ವರ್ಷಗಳ ಸದಸ್ಯತ್ವಕೆ | ರೂ. 1,501/- |
| ಆಜೀವ ಸದಸ್ಯತ್ವ | ರೂ. 5,001/- |
| ಪೋಷಕ ಸದಸ್ಯತ್ವ | ರೂ. 10,001/- |
| ಮಹಾಪೋಷಕ ಸದಸ್ಯತ್ವ | ರೂ. 25,001/- |

ಬ್ಯಾಂಕ್ ಕರೆಂಟ್ ಅಕೌಂಟ್ ವಿವರ
ಸ್ಟೇಟ್ ಬ್ಯಾಂಕ್ ಆಫ್ ಮೈಸೂರು
ವಿಜಯನಗರ ಶಾಖೆ
ಕರೆಂಟ್ ಅಕೌಂಟ್ : ಮಹಿಳಾ ವಿಶೇಷ
ಅಕೌಂಟ್ ಸಂಖ್ಯೆ: 64183295918

Bank Account Details
State Bank of Mysore
Vijay Nagar Branch
Current A/c - Mahila Vishesha
C.A. No. 64183295918

**ಕಛೇರಿ ವಿಳಾಸ:**

**ಮಹಿಳಾ ವಿಶೇಷ,**
ಕೇರಾಫ್ ಅನ್ನಪೂರ್ಣ ಎಂಟರ್‌ಪ್ರೈಸಸ್,
ನಂ. 136, ಶ್ರೀ ನೀಲಕಂಠ ಮಠ, ಗನ್‌ಹೌಸ್ ಎದುರು, ಖಿಲ್ಲೆ ಮೊಹಲ್ಲ,
ಮೈಸೂರು-570 004. ಫೋ: 88803-34444
E-mail: mahilavishesha@yahoo.com
Web: www.mahilavishesha.in

<u>**Kind Attn. to the Donors/Subscribers**</u>

Mahila Vishesha Balaga requesting you to all those who are interested to donate or subscribe please contact and encourage to run the magazine smoothly. Please pass it on this message to your friends and others. Please oblige.

***Mahila Vishesha Balaga***



# ಎಂ. ಪ್ರಕೃತಿ ವೆಡ್ಸ್ ಎಂ. ಸಂತೋಷ್ ಕುಮಾರ್

ಶ್ರೀಮತಿ ವಿ.ಕೆ. ಭಾರತಿ ಹಾಗೂ ಶ್ರೀ ಮುರಳೀಧರರವರ ಪುತ್ರಿ ಎಂ. ಪ್ರಕೃತಿ, ಎಂಬಿಎ ಹಾಗೂ ಶ್ರೀಮತಿ ಗೌರಮ್ಮ ಹಾಗೂ ಶ್ರೀ ಮಹದೇವಪ್ಪರವರ ಪುತ್ರ ಎಂ.ಸಂತೋಷ್‌ಕುಮಾರ್, ಎಂಬಿಎ ಇವರುಗಳ ವಿವಾಹ ಮಹೋತ್ಸವ ಜಯಮ್ಮ ಗೋವಿಂದೇಗೌಡ ಕಲ್ಯಾಣಮಂಟಪದಲ್ಲಿ ನಡೆಯಿತು.





ಶ್ರೀಮತಿ ವಿ.ಕೆ. ಭಾರತಿ ಹಾಗೂ ಶ್ರೀ ಮುರಳೀಧರರವರು ಮಹಿಳಾ ವಿಶೇಷ ತಿಂಗಳ ಪತ್ರಿಕೆಯ ಬಳಗದ ಸದಸ್ಯರಾಗಿದ್ದು, ಎಲ್ಲರಿಗೂ ಶುಭವನ್ನು ಕೋರಿದ್ದಾರೆ.

ಸರ್ವರಿಗೂ ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು

# ಹುಲಗಾದ್ರಿ ಎಂಟರ್‌ಪ್ರೈಸಸ್

**ನಮ್ಮಲ್ಲಿ ಎಲ್ಲಾ ಸಮಾರಂಭಗಳಿಗೆ ಬೇಕಾದ ಅಡುಗೆ ಪಾತ್ರೆಗಳು, ಗ್ಯಾಸ್ ಸ್ಟೌವ್ ಹಾಗೂ ಜಮಖಾನಗಳು ಬಾಡಿಗೆಗೆ ದೊರೆಯುತ್ತವೆ.**

ಮಾಲೀಕರು:

**ಹೆಚ್.ವಿ. ಭಾಸ್ಕರ್**

**ನಂ. 859, 15ನೇ ಕ್ರಾಸ್, ರಾಮಾನುಜ ರಸ್ತೆ, ಮೈಸೂರು-4**

**ಮೊ.: 94489-78493 / 91416-60778**



ಮಹಾಶಿವರಾತ್ರಿ ಹಬ್ಬದ ಶುಭಾಶಯಗಳು

# ವೇದಮಾತಾ ಗಾಯತ್ರೀ ಪ್ರತಿಷ್ಠಾನ

# ಅರ್ಕಗಣಪತಿ ಜ್ಯೋತಿಷ್ಯ ಕೇಂದ್ರ

**ಎಲ್ಲಾ ಶಾಂತಿ, ಪೂಜೆ, ಪ್ರತಿಷ್ಠಾಪನಾ ಕಾರ್ಯಗಳನ್ನು ಉಪನಯನ, ವಿವಾಹ ಮಾಡಿಸಲಾಗುತ್ತದೆ. ವಾಸ್ತು ನೋಡಲಾಗುತ್ತದೆ. ಸರ್ಪಶಾಂತಿ ಮತ್ತು ಆಶ್ಲೇಷ ಬಲಿ ಮಾಡಿಸಲಾಗುತ್ತದೆ.**

**ವಿದ್ವಾನ್ ಕೆ. ವಿಶ್ವನಾಥ ಭಟ್ಟ**, ಎಂ.ಎ., ಬಿ.ಎಡ್.

**ಶೈವಾಗಮ ಪ್ರವೀಣ ಮತ್ತು ವಾಸ್ತು ತಜ್ಞರು**

ನಂ. 2212, 4ನೇ ಕ್ರಾಸ್, ಬಸವೇಶ್ವರ ರಸ್ತೆ, ಕೆ.ಆರ್. ಮೊಹಲ್ಲಾ, ಮೈಸೂರು-4.

Mob.: 94486-09160 E-mail: kvbhat.arkaganapathy@gmail.com







February, 2017 MAHILA VISHESHA
Decl No. MAG (Declaration)/16/2016-17



# ಸೇವಾ ಸ್ಮರಣ ಪ್ರತಿಷ್ಠಾನ (ರಿ.)

ನಿವೇದಿತ ನಗರ, ಮೈಸೂರು

ಟಿ. ನರಸೀಪುರ ತಾಲ್ಲೂಕು ಮೂಗೂರು ಗ್ರಾಮದಲ್ಲಿರುವ ಶ್ರೀ ತ್ರಿಪುರಸುಂದರಿ ಅಮ್ಮನವರ ದೇವಸ್ಥಾನಕ್ಕೆ ಆಗಮಿಸುವ ಭಕ್ತಾದಿಗಳಿಗೆ ದೇವಸ್ಥಾನದ ಎದುರುಗಡೆ ಇರುವ ಪ್ರತಿಷ್ಠಾನದ ಅತಿಥಿ ಗೃಹದಲ್ಲಿ ತಂಗಲು ಕೊಠಡಿಗಳು ದೊರೆಯುತ್ತವೆ. ಸ್ನಾನ ಶೌಚಾಲಯಗಳ ವ್ಯವಸ್ಥೆ ಇರುತ್ತದೆ.

ಯುಗಾದಿ ಹಬ್ಬದ ದಿನದಿಂದ ಪ್ರತಿ ಶುಕ್ರವಾರ ಪರಸ್ಥಳದಿಂದ ಬರುವ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗದ ವ್ಯವಸ್ಥೆ ಮಾಡಲಾಗುವುದು. ಪ್ರಸಾದ ವಿನಿಯೋಗಕ್ಕೆ ದಾನಿಗಳು ಕೈಲಾದ ಧನಸಹಾಯವನ್ನು ಮಾಡಿ ರಶೀದಿಯನ್ನು ಪಡೆಯಬೇಕೆಂದು ಕೋರಲಾಗಿದೆ.

ಆಸಕ್ತ ಭಕ್ತಾದಿಗಳು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**ಅಧ್ಯಕ್ಷರು**

84533-14602

**ಆಡಳಿತಾಧಿಕಾರಿಗಳು**

93797-77793



Edited, Published and Owned by **H.V. Venkatasubbarao**, No. 1021, 14th Cross, 2nd Stage, Hebbal, Mysore-570 017 and Printed by B.C. Meera and Printed at Annapoorna Offset Printer, No. 511, 14th Main, Saraswathipuram, Mysore 570 009. E-mail: mahilavishesha@yahoo.com Web: www.mahilavishesha.in Editor: **H.V. Venkatasubbarao**
Mob.: 88803-34444, Decl No. MAG (Declaration)/16/2016-17


ತೆರೆದ ಅಂಚೆ